

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTIBASAVANTAPPAHOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 07 Issue : 04 Wednesday 04-09-2024 E-mail : maruti.b.hosamani76@gmail.com Page: 4 Price : Rs. 1/-

## "ಆರೋಗ್ಯ ಅರಿವು" ಜನ ಸಂಪರ್ಕ ಸಭೆ





**ಸಿಹಿ–ಕಹಿ ಸುದ್ದಿ**

**ಗುಂಡನಪಲ್ಲೆ :** ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಾಗಲಕೋಟೆ, ಪ್ರಾಥಮಿಕ ಆರೋಗ್ಯ ಕೇಂದ್ರ ಶಿರೂರ ಸಹಯೋಗದಲ್ಲಿ, ಆರೋಗ್ಯ ಉಪ ಕೇಂದ್ರ ಬೆನಕಟ್ಟಿ ವ್ಯಾಪ್ತಿಯ ಗುಂಡನಪಲ್ಲೆ ಗ್ರಾಮದಲ್ಲಿ "ಆರೋಗ್ಯ ಅರಿವು ಜನ ಸಂಪರ್ಕ ಸಭೆ ಆಯೋಜಿಸಲಾಗಿತ್ತು.

ಪ್ರಾಸ್ತಾವಿಕವಾಗಿ ಆರೋಗ್ಯ ನಿರೀಕ್ಷಣಾಧಿಕಾರಿ ಎಸ್.ಎಸ್ ಅಂಗಡಿಯವರು ನಮ್ಮ ಆರೋಗ್ಯ ನಮ್ಮ ಕೈಯಲ್ಲಿ ಮುಂಜಾಗ್ರತೆ ಕ್ರಮಗಳ ಪಾಲಿಸಿ ಆಸ್ಪತ್ರೆಗೆ ಅಲೆದಾಟ ತಪ್ಪಿಸಿ ಕೊಳ್ಳಿ ಎಂಬ ಘೋಷ ವಾಕ್ಯಯೊಂದಿಗೆ, ಸಾಂಕ್ರಾಮಿಕ ರೋಗಗಳಾದ ಮಲೇರಿಯಾ ಆನೆಕಾಲು, ಮೆದುಳು ಜ್ವರ, ಡೆ–ಂಗ್ಯೂ, ಚಿಕೂನ್ ಗುನ್ಯಾ, ಝಿಕಾ ಸೊಳ್ಳೆ ಕಚ್ಚುವಿಕೆ ಯಿಂದ ಒಬ್ಬರಿಂದ ಒಬ್ಬರಿಗೆ ಸಾಂಕ್ರಾಮಿಕವಾಗಿ ಹರಡುವುವು. ಸೊಳ್ಳೆಗಳ ಉತ್ಪತ್ತಿ ತಾಣಗಳು ಬೆಳೆಯದಂತೆ ನೋಡಿ ಕೊಳ್ಳಬೇಕು ಸೊಳ್ಳೆ ಪರದೆ ನಿರೋಧಕ ಬಳಸ ಬೇಕು ಮನೆ ಸುತ್ತ ಮುತ್ತ ಪರಿಸರ ಸ್ವಚ್ಚತೆ ಕಾಪಾಡಿ ಕೊಳ್ಳಬೇಕು ವಾಂತಿ ಬೇಧಿ ತಡೆಗೆ ಶುದ್ಧ ನೀರು ಸೇವನೆ ವೈಯಕ್ತಿಕ ಸ್ವಚ್ಚತೆ ಆದ್ಯತೆ ನೀಡಬೇಕು.

ಯಾವುದೇ ತರಹ ಜ್ವರ ಕಾಣಿಸಿದರೆ ಹತ್ತಿರದ ಸರಕಾರಿ ಆಸ್ಪತ್ರೆಯಲ್ಲಿ ಪರೀಕ್ಷೆ ಚಿಕಿತ್ಸೆ ಉಚಿತವಾಗಿರುತ್ತದೆ.

ಆರೋಗ್ಯ ಇಲಾಖೆಯ ಅಧಿಕಾರಿಗಳು, ತಮ್ಮ ಮನೆಗೆ ಬಂದಾಗ ಸರಿಯಾದ ಮಾಹಿತಿ ನೀಡಿ ಸಾರ್ವಜನಿಕರು ಸಹಕಾರ ನೀಡಬೇಕು.

ಆರೋಗ್ಯ ಅರಿವು ಜನ ಸಂಪರ್ಕ ಸಭೆ ಕಾರ್ಯಕ್ರಮದಲ್ಲಿ ಆರೋಗ್ಯ ಅಧಿಕಾರಿಗಳು, ಗ್ರಾಮದ ಶ್ರೀಶೈಲ ಸಂ ಮೇಟಿ, ಹುಚ್ಚಪ್ಪ ಕಾರಜೋಳ,ರಮೇಶ ಕಟ್ಟಿಮನಿ, ಪರಸಪ್ಪ ವಾಲಿಕಾರ, ನಾಗರಾಜ್ ಪಾಟೀಲ್, ರಂಗಪ್ಪ ವಾಲಿಕಾರ, ನಿಂಗಪ್ಪ ಜುಮನಾಳ,ಬಾಲಪ್ಪ ಪೂಜಾರಿ ಗ್ರಾಮದ ಮುಖಂಡರು ಯುವಕರು ಭಾಗವಹಿಸಿದ್ದರು.

## ಮಸ್ಕಿಯ ಬೆಟ್ಟದ ಮೇಲೆ ಶ್ರಾವಣ ಮಾಸದ ಕೊನೆಯ ಸೋಮವಾರ ಮಲ್ಲಿಕಾರ್ಜುನನ ದರ್ಶನಕ್ಕೆ ಸಾಲುಗಟ್ಟಿದ ಭಕ್ತರು

**ಮಸ್ಕಿ :** ಪಟ್ಟಣದ ಬೆಟ್ಟದ ಮೇಲೆ ಇರುವ ಮಲ್ಲಿಕಾರ್ಜುನನ ದರ್ಶನಕ್ಕೆ ಶ್ರಾವಣ ಮಾಸದ ಕೊನೆಯ ಸೋಮವಾರ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಬಂದು ಪೂಜೆ ಸಲ್ಲಿಸಿದರು.

ಬೆಳಿಗ್ಗೆ 3 ಗಂಟೆಯಿಂದಲೇ ಕಾಲ್ನಡಿಗೆಯಲ್ಲಿ ಬೆಟ್ಟ ಹತ್ತಿದ ಮಹಿಳೆಯರು ಸೇರಿದಂತೆ ಸಾವಿರಾರು ಭಕ್ತರು ಮಲ್ಲಿಕಾರ್ಜುನನ ದರ್ಶನಕ್ಕೆ ಸಾಲುಗಟ್ಟಿ ನಿಂತಿದ್ದರು.

ಸಿದ್ದಯ್ಯ ಹೆಸರೂರು ಹಿರೇಮಠ ರವರ ನೇತೃತ್ವದಲ್ಲಿ ಮಲ್ಲಿಕಾರ್ಜುನ ದೇವರ ಅಭಿಷೇಕ ಸೇರಿದಂತೆ ಮಲ್ಲಯ್ಯನ ವಿಗ್ರಹಕ್ಕೆ ವಿವಿಧ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ನಡೆದವು. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಿದ್ದ ರಿಂದ ಪೊಲೀಸರು ಸ್ಥಳದಲ್ಲಿದ್ದು ಸಾಲಿನಲ್ಲಿ ತೆರಳುವಂತೆ ಭಕ್ತರಿಗೆ ಸೂಚಿಸುತ್ತಿದ್ದ ದೃಶ್ಯ ಕಂಡು ಬಂತು. ಭಕ್ತರಿಗೆ ಪ್ರಸಾದ ವ್ಯವಸ್ಥೆ ಹಾಗೂ ಕುಡಿಯುವ ನೀರಿನ ಸೌಕರ್ಯ ಕಲ್ಪಿಸಲಾಯಿತು.

ಸಂಜೆ 6 ಗಂಟೆಗೆ ಬೆಟ್ಟದ ಮೇಲಿಂದ ಮಲ್ಲಿಕಾರ್ಜುನನ ಉತ್ಸವ ಮೂರ್ತಿಯನ್ನು ಪಲ್ಲಕ್ಕಿ ಮೂಲಕ ಡೊಳ್ಳು ಸೇರಿದಂತೆ ವಿವಿಧ ವಾದ್ಯಗಳೊಂದಿಗೆ ಪಟ್ಟಣಕ್ಕೆ ಕರೆದು ಕೊಂಡು ಬರಲಾಯಿತು.

## ಗಜೇಂದ್ರಗಡ ಪುರಸಭೆ ಬಿಜೆಪಿ ಬಂಡಾಯ ಅಭ್ಯರ್ಥಿಗಳು ಅಧ್ಯಕ್ಷ ಸುಭಾಷ್ ಮ್ಯಾಗೇರಿ, ಸವಿತಾ ಬಿದರಳ್ಳಿ ಉಪಾಧ್ಯಕ್ಷರ ಆಯ್ಕೆ

**ಸಿಹಿ–ಕಹಿ ಸುದ್ದಿ**

**ಗಜೇಂದ್ರಗಡ :** ಸ್ಥಳೀಯ ಪುರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಚುನಾವಣೆಯಲ್ಲಿ ಹಲವು ಅಚ್ಚರಿ ನಡೆದವು ಅಧಿಕೃತ ಅಭ್ಯರ್ಥಿಯ ಸೋಲಿನೊಂದಿಗೆ ಬಿಜೆಪಿ ಮುಖಭಂಗ ಅನುಭವಿಸಿದರೆ, ತನ್ನ ಒಗ್ಗಟ್ಟನ್ನು ಕಾಯ್ದು ಕೊಂಡು ಬಂಡಾಯ ಅಭ್ಯರ್ಥಿಗೆ ಬೆಂಬಲ ನೀಡಿ ಅವರನ್ನು ಗೆಲ್ಲಿಸುವ ಮೂಲಕ ಕಾಂಗ್ರೆಸ್ ಜಯದ ನಗೆ ಬೀರಿತು. ತೀವ್ರ ಕುತೂಹಲ ಕೆರಳಿಸಿದ್ದ ಗಜೇಂದ್ರಗಡ ಪುರಸಭೆ ಅಧ್ಯಕ್ಷ ಉಪಾಧ್ಯಕ್ಷ ಚುಣಾವಣೆಯು ಚುನಾವಣಾಧಿಕಾರಿ ಗಜೇಂದ್ರಗಡ ತಹಸೀಲ್ದಾರ ಕೀರಣ ಕುಮಾರ ಕುಲಕರ್ಣಿ ಅವರ ನೇತೃತ್ವದಲ್ಲಿ ಜರುಗಿತು.




ಬೆಳಿಗ್ಗೆ ಚುಣಾವಣಾ ಪ್ರಕ್ರಿಯೆ ಪ್ರಾರಂಭ ವಾಗುತ್ತಿದ್ದಂತೆ ಮೊದಲು ಸಿದ್ದಪ್ಪ ಬಂಡಿ ನೇತೃತ್ವದಲ್ಲಿ ಪುರಸಭೆ ಆಗಮಿಸಿದ ಕಾಂಗ್ರೇಸ್ ಪರ ಅಭ್ಯರ್ಥಿಗಳು ಅಧ್ಯಕ್ಷ ಸ್ಥಾನಕ್ಕೆ 19 ನೇ ವಾರ್ಡಿನ ಸುಭಾಸ್ ಮ್ಯಾಗೇರಿ (ಅನುಮೋದಕರ ಕೈಯಿಂದ) ಉಪಾಧ್ಯಕ್ಷ ಸ್ಥಾನಕ್ಕೆ 15 ನೇ. ವಾರ್ಡಿನ ಸವಿತಾ ಬಿದರಳ್ಳಿ ನಾಮಪತ್ರ ಸಲ್ಲಿಸಿದರು. ಬಿಜೆಪಿಯಿಂದ 2 ನೇ. ವಾರ್ಡ್ನ ಯಮನಪ್ಪ ತಿರಕೋಜಿ, ಅಧ್ಯಕ್ಷ ಸ್ಥಾನಕ್ಕೆ ಹಾಗೂ 4 ನೇ ವಾರ್ಡ್ನ ಸುಜಾತಾಬಾಯಿ ಸಿಂಗ್ರಿ ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದರು. ಸ್ಥಳೀಯ ಪುರಸಭೆ ಸಭಾ ಭವನದಲ್ಲಿ ಮಂಗಳವಾರ ನಡೆದ ಚುನಾವಣೆಯಲ್ಲಿ ಒಟ್ಟು 23 ಸದಸ್ಯ ಸ್ಥಾನವನ್ನು ಹೊಂದಿರುವ ಅದರಲ್ಲಿ ಬಿಜೆಪಿ ಬಂಡಾಯ 7 ಸದಸ್ಯರು ಹಾಗೂ ಕಾಂಗ್ರೆಸ್ನ 5 ಸದಸ್ಯರು, ರೋಣ ಶಾಸಕ ಜಿ.ಎಸ್ ಪಾಟೀಲ ಸೇರಿ ಒಟ್ಟು 13 ಸದಸ್ಯರ ಬೆಂಬಲ ದಿಂದ ಕಾಂಗ್ರೆಸ್ ಪರವಾಗಿ ಮತ ಚಲಾಯಿಸಿದರು. ಒಟ್ಟು 23 ಸದಸ್ಯ ಬಲದ ಗಜೇಂದ್ರಗಡ ಪುರ ಸಭೆಗೆ ಮಧ್ಯಾಹ್ನ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸುಭಾಸ್ ಮ್ಯಾಗೇರಿ ಮತ್ತು ಉಪಾಧ್ಯಕ್ಷೆ ಸವಿತಾ ಬಿದರಳ್ಳಿ ಪರ ಕಾಂಗ್ರೆಸ್ಸಿನ 5 ಸದಸ್ಯರು ಮತ್ತು ಬಿಜೆಪಿಯ 7 ಬಂಡಾಯ ಸದಸ್ಯರು ಮತ್ತು ಶಾಸಕ ಜಿ.ಎಸ್. ಪಾಟೀಲ್ ಮತ ನೀಡಿದ್ದ–ರಿಂದ 13 ಸದಸ್ಯರ ಬೆಂಬಲ ದಿಂದ ಆಯ್ಕೆ ಯಾದರು. ಬಿಜೆಪಿಯಿಂದ ಸ್ಪರ್ಧೆ ಮಾಡಿದ್ದ ಇಬ್ಬರು ಅಭ್ಯರ್ಥಿಗಳು 11 ಮತಗಳನ್ನು ಪಡೆಯಲು ಮಾತ್ರ ಶಕ್ತರಾದರು. ಈ ಸಂದರ್ಭದಲ್ಲಿ ಮಾತನಾಡಿದ ಜಿ.ಎಸ್. ಪಾಟೀಲ್. ಪಕ್ಷದಲ್ಲಿನ ಸಮನ್ವಯ ಕೊರತೆ, ತಾರತಮ್ಯ ನೀತಿ, ಕೆಲವೇ ಸದಸ್ಯರ ಕೇಂದ್ರೀಕೃತ ಆಡಳಿತ ಮತ್ತು ಅನುದಾನ ಹಂಚಿಕೆಯಲ್ಲಿ ತಾರತಮ್ಯವನ್ನು ವಿರೋಧಿಸಿ ನಮ್ಮ ಬೆಂಬಲ ಕೇಳಿದರು ಆದ್ದರಿಂದ ಕಡಿಮೆ ಅವಧಿಯಲ್ಲಿ ಗಜೇಂದ್ರಗಡ ಅಭಿವೃದ್ಧಿಯ ದೃಷ್ಟಿ ಕೋನದಿಂದ ನಾವೂ ಬಿಜೆಪಿ ಬಂಡಾಯ ಅಭ್ಯರ್ಥಿಗಳನ್ನು ಬೆಂಬಲಿಸಿದ್ದೇವೆ ಎಂದರು.

ನೂತನ ಅಧ್ಯಕ್ಷ ಸುಭಾಸ್ ಮ್ಯಾಗೇರಿ ಮಾತನಾಡಿ ಗಜೇಂದ್ರಗಡ ಅಭಿವೃದ್ಧಿ ಒಂದೇ ದೃಷ್ಟಿ ಕೋನದಿಂದ ನಾವೂ ಬಂಡಾಯವೆದ್ದು ಈ ನಿರ್ಧಾರ ಕೈ ಗೊಂಡಿದ್ದೇವೆ ಎಂದರು. ಈ ಸಂದರ್ಭದಲ್ಲಿ ಸಿದ್ದಪ್ಪ ಬಂಡಿ, ಮಿಥುನ್ ಪಾಟೀಲ,ಶಿವರಾಜ ಘೋರ್ಪಡೆ, ಮುರ್ತುಜ ಡಾಲಯತ, ವೆಂಕಟೇಶ ಮುದಗಲ, ರಾಜು ಸಾಂಗ್ಲಿಕರ, ಶ್ರೀಧರ್ ಬಿದರಳ್ಳಿ, ಬಸವರಾಜ ಶೀಲವಂತರ, ಮಂಜುಳಾ ರೇವಡಿ, ಅಜಿತ್ ಬಾಗಮರ, ವಿ. ಬಿ. ಸೋಮನಕಟ್ಟಿಮಠ, ಸಿದ್ದು ಗೊಂಗಡಶೆಟ್ಟಿ, ಅರ್ಜುನ ರಾಠೋಡ, ಚಂಬಣ್ಣ ಚವಡಿ, ಪ್ರಬಣ್ಣ ಚವಡಿ, ಹನಮಂತ ಗೌಡ್ರ, ಅಂದಪ್ಪ ರಾಠೋಡ, ಅರಿಹಂತ ಬಾಗಮಾರ, ಬಸವರಾಜ ಚೆನ್ನಿ. ಶ್ರೀಧರ ಗಂಜೀಗೌಡ್ರ, ಶಶಿ ಒಕ್ಕಲರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಶಿವಾನಂದ.ಎಫ್. ಗೋಗೇರಿ.ತೋಟಗುಂಟಿ.ಗದಗ**

## 21ನೇ ಜಾನುವಾರು ಗಣತಿ ಕುರಿತು ತರಬೇತಿ ಕಾರ್ಯಾಗಾರ ದತ್ತಾಂಶ ಸಂಗ್ರಹಣೆಯಲ್ಲಿ ಎಣಿಕೆದಾರರ ಪಾತ್ರ ಮುಖ್ಯ: ಡಾ.ನಾಯಕ

**ಬಾಗಲಕೋಟೆ :** ರೈತರ ಬಳಿ ಇರುವ ಜಾನುವಾರುಗಳ ದತ್ತಾಂಶ ಸಂಗ್ರಹಣೆಯಲ್ಲಿ ಏಣಿಕೆದಾರರ ಪಾತ್ರ ಮುಖ್ಯವಾಗಿದೆ ಎಂದು ಧಾರವಾಡ ಪಶುಪಾಲನೆ ಮತ್ತು ವೈದ್ಯಕೀಯ ಸೇವಾ ಇಲಾಖೆಯ ಜಂಟಿ ನಿರ್ದೇಶಕ ಡಾ.ಬಿ. ಎಲ್.ಪರಮೇಶ್ವರ ನಾಯಕ ಹೇಳಿದರು.



ನಗರದ ಪಶು ಆಸ್ಪತ್ರೆಯಲ್ಲಿ ಹಮ್ಮಿಕೊಂಡ ಜಾನುವಾರುಗಣತಿಕುರಿತುಗಣತಿದಾರರಮತ್ತು ಮೆಲ್ವಿಚಾರಕರ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಗಣತಿ ಕಾರ್ಯ ಸೆಪ್ಟೆಂಬರ 1 ರಿಂದ ಪ್ರಾರಂಭವಾಗಿ ಡಿಸೆಂಬರ31ವರೆಗೆರಾಷ್ಟ್ರಾದ್ಯಂತಏಕಕಾಲದಲ್ಲಿ ಜರುಗಲಿದೆ. ಪ್ರತಿ 5 ವರ್ಷಕ್ಕೊಮ್ಮೆ ಗಣತಿ ಕಾರ್ಯ ನಡೆಸಲಾಗುತ್ತಿದ್ದು, ಗಣತಿದಾರರು ಪ್ರತಿಯೊಬ್ಬ ರೈತರ ಮನೆಗೆ ಹೋಗಿ ಜಾನುವಾರುಗಳ ಮಾಹಿತಿ ಸಂಗ್ರಹಿಸಿ ಎಮ್ಮೆಗಳಲ್ಲಿ ನೋಂದಾಯಿತ ತಳಿ ಧಾರವಾಡಿ ಮಾತ್ರ ಇದ್ದು, ಇತರೆ ತಳಿಗಳಾದ ಸುರ್ತಿ, ಮುರ್ರಾ, ಜಾಫರ್ ಬಾದಿ, ಮೆಹಸನ ಮತ್ತು ಪಂಡರಾಪುರಿ ಸಹ ದಾಖಲಿಸಲು ತಿಳಿಸಿದರು. ಜಿಲ್ಲೆಯ ಗಡಿ ಭಾಗದಲ್ಲಿ ಕೃಷ್ಣವ್ಯಾಲಿ, ಖಿಲಾರಿ, ಹಳ್ಳಿಕಾರ್ ಮತ್ತು ಗೀರ್ ತಳಿಗಳು ಲಭ್ಯವಿದ್ದು, ತಪ್ಪದೇ ದಾಖಲಿಸಲು ಸೂಚಿಸಿದರು. ಸ್ಥಳೀಯ ತಳಿಗಳನ್ನು ಗಣತಿಯಲ್ಲಿ ದಾಖಲಿಸದೇ ಇದ್ದಲ್ಲಿ ಸ್ಥಳೀಯ ತಳಿಗಳು ಅಳಿವಿನಂಚಿಗೆ ಎಂದು ನೋಟಿಪೈ ಆಗುವ ಸಾಧ್ಯತೆ ಇರುವದರಿಂದ ತಳಿಗಳ ಗುಣಲಕ್ಷಣಗಳನ್ನು ಪರಿಶೀಲಿಸಿ, ನಿಖರವಾಗಿ ಗುರುತಿಸಿ ಕುರಿ ಮತ್ತು ಮೇಕೆ ಹಾಗೂ ಕುಕ್ಕುಟಗಳ ಮತ್ತು ನಾಯಿಗಳ ಮಾಹಿತಿಯನ್ನು ಸರಿಯಾಗಿ ಸಂಗ್ರಹಿಸಿ ತಂತ್ರಾಂಶದಲ್ಲಿ ಇಂದ್ರೀಕರಿಸಲು ತಿಳಿಸಿದರು.

ಜಿಲ್ಲಾ ಪಶುಪಾಲನಾ ಇಲಾಖೆಯ ಉಪನಿರ್ದೇಶಕ ಡಾ.ಎಸ್.ಎಚ್.ಕರಡಿಗುಡ್ಡ ಮಾತನಾಡಿ ಗಣತಿ ಕಾರ್ಯವು ಮೊಬೈಲ್ ಅಪ್ಲಿಕೇಷನ್ಮೂಲಕಜರುಗುತ್ತಿದ್ದು,ಜಿಲ್ಲೆಯಲ್ಲಿ ಅಂದಾಜು 3,70,982 ಕುಟುಂಬಗಳ ಸಂಖ್ಯೆ ಇದೆ 91 ಗಣತಿದಾರರು, 21 ಮೇಲ್ವಿಚಾರಕರು ಒಟ್ಟು 613 ಹಳ್ಳಿ ಹಾಗೂ 394 ವಾರ್ಡಗಳಲ್ಲಿ ಗಣತಿಕಾರ್ಯನಿರ್ವಹಿಸಬೇಕಿದೆ.ನಿಖರವಾದ ಅಂಕಿ–ಅಂಶಗಳ ಸಂಗ್ರಹಣೆ ಮಾಡುವಂಎ ಗಣತಿದಾರರಿಗೆ ಸಲಹೆ ನೀಡಿದರು. 21ನೇ ಜಾನುವಾರುಗಣತಿಕಾರ್ಯಕ್ಕೆಸಾರ್ವಜನಿಕರು ಸಹಕರಿಸಬೇಕೆಂದು ತಿಳಿಸಿದರು.

ಮಾಸ್ಟರ ತರಬೇತುದಾರರಾದ ಡಾ.ಶ್ರವಣ–ಕುಮಾರ ಗದ್ದಿ ಗಣತಿ ಕುರಿತು ತರಬೇತಿ ನೀಡಿದರು. ಕಾರ್ಯಕ್ರಮದಲ್ಲಿ ಜಾನುವಾರು ರೋಗಗಳ ಕಣ್ಗಾವಲು ಯೋಜನೆಯ ಉಪನಿರ್ದೇಶಕರಾದ ಡಾ.ರಮೇಶ ದೊಡಮನಿ, ಡಾ.ಆನಂದ ರೆಡ್ಡಿ, ಪಶು ಔಷಧ ಭಂಡಾರ ಉಪನಿರ್ದೇಶಕ ಹೆಬ್ಬಾಳ, ಪಾಲಿಕ್ಲಿನಿಕ್ ಉಪನಿರ್ದೇಶಕ ಡಾ.ಜಿ.ಬಿ.ಗುರವ, ಮುಖ್ಯ ಪಶು ವೈದ್ಯಾಧಿಕಾರಿ ಡಾ.ಆರ್.ಎಸ್.ಪದರಾ ಸೇರಿದಂತೆ ಇತರರು ಉಪಸ್ಥಿತರಿದ್ದರು. ಮುಖ್ಯ ಪಶು ವೈದ್ಯಾಧಿಕಾರಿ ಡಾ.ಮುರುಗೇಶ ಹೂಗಾರ ಸ್ವಾಗತಿಸಿದರು. ಡಾ.ಎಸ್.ಪಿ.ಬೇನಾಳ ವಂದಿಸಿದರು. ಎಸ್. ಎಚ್.ಘಂಟಿ ಕಾರ್ಯಕ್ರಮ ನಿರೂಪಿಸಿದರು.

## ಅಮೀನಗಡ : ಅಧ್ಯಕ್ಷೆ ಹಾಗೂ ಉಪಾಧ್ಯಕ್ಷೆ ಪದಗ್ರಹಣ ಕಾರ್ಯಕ್ರಮ

**ಅಮೀನಗಡ :** ಪಟ್ಟಣವನ್ನು ಸಮಗ್ರ ಅಭಿವೃದ್ಧಿ ಮಾಡುವ ಮೂಲಕ ಜಿಲ್ಲೆಯಲ್ಲಿಯೇ ಮಾದರಿ ಪಟ್ಟಣವನ್ನಾಗಿಸಲು ಅಧ್ಯಕ್ಷೆ, ಉಪಾಧ್ಯಕ್ಷೆ ಹಾಗೂ ಸರ್ವ ಸದಸ್ಯರು ಯತ್ನಿಸಬೇಕೆಂದು ಮಾಜಿ ಪಪಂ ಅಧ್ಯಕ್ಷೆ ಹಾಗೂ ಹಾಲಿ ಸದಸ್ಯೆ ಸುಜಾತಾ ತತ್ರಾಣಿ ಹೇಳಿದರು.



ಪಪಂ ಅಧ್ಯಕ್ಷರ ಕಾರ್ಯಾಲಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಅಧ್ಯಕ್ಷೆ ಹಾಗೂ ಉಪಾಧ್ಯಕ್ಷೆ ಪದಗ್ರಹಣ ಕಾರ್ಯಕ್ರಮದಲ್ಲಿ ಮಾತನಾಡಿದಅವರುಚುನಾವಣೆಯಲ್ಲಿತಂತ್ರ–ಪ್ರತಿತಂತ್ರ ಸಾಮಾನ್ಯ ಎಲ್ಲಾ ಪಪಂ ಸದಸ್ಯರು ಅದನ್ನು ಬದಿಗೊತ್ತಿ ಒಂದಾಗಿ ಅಭಿವೃದ್ಧಿಗೆ ಶ್ರಮಿಸಬೇಕು. ಮತದಾರರು ನಮ್ಮ ಮೇಲೆ ಇಟ್ಟ ಪ್ರೀತಿ ವಿಶ್ವಾಸವನ್ನು ಎಲ್ಲರ ಸಹಕಾರದೊಂದಿಗೆ ಉಳಿಸಿಕೊಂಡು ಹೋಗೋಣ ಎಂದರು.

ನೂತನ ಅಧ್ಯಕ್ಷೆ ಬೇಬಿ ರಮೇಶ ಚವ್ಹಾಣ ಮಾತನಾಡಿ, ಪಪಂ ಎಲ್ಲಾ ಸದಸ್ಯರು, ಸಿಬ್ಬಂದಿಗಳು ಅಧಿಕಾರಿಗಳು ಹಾಗೂ ವಿವಿಧ ಸಮಾಜದವರು ತಮ್ಮೆಲ್ಲರ ಸಹಾಯ ಮತ್ತು ಸಹಕಾರದಿಂದ ನನಗೆ ದೊರೆತಿರುವ ಅಧ್ಯಕ್ಷೆ ಸ್ಥಾನವನ್ನು ಪ್ರಾಮಾಣಿಕವಾಗಿ ಊರಿನ ಅಭಿವೃದ್ಧಿಗೋಸ್ಕರ ಶ್ರಮಿಸುತ್ತೇನೆ ಎಂದರು.

ಸ್ಥಳೀಯ ಪಪಂ ನೂತನ ಉಪಾಧ್ಯಕ್ಷೆ ಉಮಾಶ್ರೀ ಶ್ರೀನಾಥ ಹಣಗಿ ಮಾತನಾಡಿ, ನೇಕಾರ ಕುಟುಂಬದಲ್ಲಿ ಜನಿಸಿದ ನನಗೆ ಪಪಂ ಉಪಾಧ್ಯಕ್ಷೆಯಾಗಿ ಸೇವೆಸಲ್ಲಿಸುವ ಭಾಗ್ಯ ದೊರೆಯಲು ಸದಸ್ಯರ ಸಹಕಾರ ಹಾಗೂ ಮಾಜಿ ಶಾಸಕರ, ಕಾರ್ಯಕರ್ತರ ಬೆಂಬಲವೇ ಕಾರಣ. ಅಧ್ಯಕ್ಷರ ಹಾಗೂ ಸದಸ್ಯರ, ಪಪಂ ಸಿಬ್ಬಂದಿಗಳು ಜೊತೆಗೆ ಸೇರಿ ಅಭಿವೃದ್ಧಿಗೆ ಸಹಕರಿಸುವೆ ಎಂದು ಹೇಳಿದರು.

ಪಪಂ ಸದಸ್ಯರಾದ ಬಾಬು ಮನ್ಸೂರಸಾಬ ಚಬ್ಬಿ, ವಿಜಯಕುಮಾರ ಶಿದ್ದಪ್ಪ ಕನ್ನೂರ, ಶ್ರೀದೇವಿ ಮಲ್ಲಿಕಾರ್ಜುನ ನಿಡಗುಂದಿ, ಸಂತೋಷ ಈರಣ್ಣ ಕಂಗಳ, ಸಂತೋಷ ಬಸವರಾಜ ಐಹೊಳ್ಳಿ,ಬಸಪ್ಪರುದ್ರಪ್ಪಬೇವೂರ, ಮುಖಂಡರಾದ ಯಮನಪ್ಪ ಕತ್ತಿ, ರಾಹುಲ ಚವ್ಹಾಣ, ಬಸು ಯಡ್ರಾಮಿ, ಶಂಕ್ರಯ್ಯ ರುದ್ರಯ್ಯ ರೇವಣಕಿಮಠ, ಮಹಾಂತೇಶ ಹಿರೇಮಠ, ರವಿ ರಾಠೋಡ, ಪಪಂ ಮುಖ್ಯಾಧಿಕಾರಿ ಸುರೇಶ ಪಾಟೀಲ ಸೇರಿದಂತೆ ಇತರರು ಇದ್ದರು.

## 17 ನೆಯ ತಿರುಳುಗನ್ನಡ ಸಾಂಸ್ಕೃತಿಕ ಸಮ್ಮೇಳನ ತಿರುಳುಗನ್ನಡ ನಾಡಿನ ಕನ್ನಡವೇ ಶ್ರೇಷ್ಠ: ಷಣ್ಮುಖಯ್ಯ ತೋಟದ




**ಕೊಪ್ಪಳ :** ಅಮೋಘವರ್ಷ ನೃಪತುಂಗನ ಗ್ರಂಥದಲ್ಲಿ ತಿರುಳುಗನ್ನಡ ನಾಡಿನ ಪ್ರಸ್ತಾಪವಿದೆ ತಿರುಳು ಕನ್ನಡ ನಾಡಿಗೆ ಕೋಪನಾಣಚಲವೆ ಕೇಂದ್ರವಾಗಿತ್ತು ಈ ಕೇಂದ್ರದ ಭಾಷೆಯೇ ಸಮೃದ್ಧ ಹಾಗೂ ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆಯ ಹಿನ್ನೆಲೆಯ ಭಾಷೆಯಾಗಿತ್ತು

ಶ್ರೇಷ್ಠಕವಿಗಳುಸಂತರೋವಿದ್ವಾಂಸರುಈನಾಡಿನಲ್ಲಿಬೆಳೆದುಪ್ರಸಿದ್ಧರಾದವರು. ಇಂತಹಮಣ್ಣಿನಲ್ಲಿಸಾಹಿತ್ಯಮತ್ತುಸಾಂಸ್ಕೃತಿಕಸಮ್ಮೇಳನಗಳುನಿರಂತರವಾಗಿ ನಡೆಯುತ್ತಿರುವುದು ಸಂತೋಷದ ವಿಚಾರ ತಿರುಳು ಕನ್ನಡ ಪ್ರತಿಷ್ಠಾನ 17ನೇ ತಿರುಳು ಕನ್ನಡ ಸಾಂಸ್ಕೃತಿಕ ಸಮ್ಮೇಳನವನ್ನು ಆಯೋಜಿಸಿ ಈ ಭಾಗದ ಪ್ರತಿಭೆಗಳಿಗೆ ಸೂಕ್ತ ವೇದಿಕೆಯನ್ನು ಒದಗಿಸಿಕೊಟ್ಟಿರುವುದು ಅಭಿನಂದನೀಯ ಎಂದರು ಅವರು

ಕೊಪ್ಪಳ ಜಿಲ್ಲಾ ನಾಗರಿಕರ ವೇದಿಕೆ ವತಿಯಿಂದ 17ನೇ ಬಾರಿಗೆ ನಡೆದ ಕೊಪ್ಪಳ ಜಿಲ್ಲಾ ಉತ್ಸವವದಲ್ಲಿ 17ನೇ ತಿರುಳು ಕನ್ನಡ ಸಾಂಸ್ಕೃತಿಕ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಸಮ್ಮೇಳನದ ಸಂಚಾಲಕ ಮಹೇಶ್ ಬಾಬು ಸುರ್ವೆ ನೇತೃತ್ವದಲ್ಲಿ ಕಳೆದ 16 ವರ್ಷಗಳಿಂದ

ಕೊಪ್ಪಳ ಜಿಲ್ಲೆಯ ಐತಿಹಾಸಿಕ

ಸಾಂಸ್ಕೃತಿಕ ಪರಂಪರೆ ಮತ್ತು ಸ್ಥಳೀಯ ಗ್ರಾಮೀಣ ಜಾನಪದ ಕಲೆಗಳ ಅನಾವರಣ. ಜಿಲ್ಲೆಯ ಪ್ರತಿಭಾವಂತ ಪ್ರತಿಭೆಗಳ ಪ್ರತಿಭಾ ಶೋಧ

ಮಾಡುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ಹಮ್ಮಿಕೊಂಡು ಮುನ್ನಡೆಸುತ್ತಿರುವುದು ಅಭಿನಂದನೆಯ ಎಂದರು.

ಸಮ್ಮೇಳನದ ಸರ್ವಾಧ್ಯಕ್ಷರಾದ ಬಾನಾಪುರದ ರಥ ಶಿಲ್ಪಿ ಶ್ರೀ ಯಲ್ಲಪ್ಪ ಬಡಿಗೇರ್ ದಂಪತಿಗಳಿಗೆ ವೇದಿಕೆಯಲ್ಲಿ ಗಣ್ಯರ ಸಮ್ಮುಖದಲ್ಲಿ ಸಮ್ಮೇಳನದ ಸನ್ಮಾನ ಮಾಡಲಾಯಿತು.

ಸನ್ಮಾನ ಸ್ವೀಕರಿಸಿ ನನ್ನಂತಹ ಗ್ರಾಮೀಣ ರಥಶಿಲ್ಪದ ಪ್ರತಿಭೆಗಳಿಗೆ ಸಮ್ಮೇಳನ ಅಧ್ಯಕ್ಷರ ಗೌರವ ನೀಡಿರುವುದು ಸಂತಸದ ವಿಚಾರ ಶ್ರೀ ಗವಿಸಿದ್ದೇಶ್ವರ ಕೃಪಾಶೀರ್ವಾದದಿಂದ ಈಗಾಗಲೇ ನಾನು ನೂರಾರು ರಥಗಳನ್ನು ನಾಡಿನಾದ್ಯಂತ ಮಾಡಿ ಕೊಟ್ಟಿದ್ದೇನೆ. ಈ ರಥಸಲ್ಪದ ಸೇವೆಯನ್ನ ಪರಿಗಣಿಸಿ ಕೊಪ್ಪಳ ಜಿಲ್ಲಾ ಉತ್ಸವ ಸಮಿತಿ ನನ್ನನ್ನು ಸಮ್ಮೇಳನ ಅಧ್ಯಕ್ಷರನ್ನಾಗಿ ಮಾಡಿ ಗೌರವ ನೀಡುತ್ತಿರುವುದು ಸಂತಸದ ವಿಚಾರ ಈ ರೀತಿಯ ಕಲಾ ಪೋಷಣೆ ನಿರಂತರವಾಗಿ ನಡೆಯಲಿ ನನ್ನಂತಹ ಕಲಾಕಾರನಿಗೆ ಇಂತಹ ವೇದಿಕೆಗಳು ನೀಡುವ ಗೌರವಗಳು ನನಗೆ ಹೆಚ್ಚಿನ ಸಾಧನೆ ಮಾಡಲು ಸಹಕರಿಯಾಗಲಿವೆ ಎಂದರು.

ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ನಾಗರಿಕರ ವೇದಿಕೆ ಉಪಾಧ್ಯಕ್ಷ ಸಿದ್ದಪ್ಪ ಹಂಚಿನಾಳ

ಕಳೆದ 16 ವರ್ಷಗಳಿಂದಲೂ ನಮ್ಮ ಜಿಲ್ಲೆ ನಮ್ಮ ಹೆಮ್ಮೆ ಕಾರ್ಯಕ್ರಮದಡಿಯಲ್ಲಿ ನಿರಂತರವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಾಗರಿಕರ ವೇದಿಕೆ ನಡೆಸಿಕೊಂಡು ಬರುತ್ತಿದೆ

ಜಿಲ್ಲೆಯ ಜನಪ್ರತಿನಿಧಿಗಳು ಅಧಿಕಾರಿಗಳು ಸೂಕ್ತ ರೀತಿಯಲ್ಲಿ ಸ್ಪಂದಿಸಿ ಉತ್ಸವವನ್ನು ಯಶಸ್ವಿಗೊಳಿಸುವಲ್ಲಿ ಸಹಕಾರಿಯಾಗಿದ್ದಾರೆ

ಜಿಲ್ಲೆಯ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳೆಸುವಲ್ಲಿ ನಾಗರಿಕ ವೇದಿಕೆಯ ಪಾತ್ರ ಪ್ರಮುಖವಾದದ್ದು ಕಳೆದ ಒಂದುವರೆ ದಶಕದಲ್ಲಿ ನಾಡಿನ ಬಹುತೇಕ ಕಲಾತಂಡಗಳು ಜಿಲ್ಲಾ ಉತ್ಸವದಲ್ಲಿ ಭಾಗವಹಿಸಿ ಪ್ರದರ್ಶನ ನೀಡಿವೆ ಸ್ಥಳೀಯ ಗ್ರಾಮೀಣ ಕಲಾತಂಡಗಳು ಭಾಗವಹಿಸಿ ಪ್ರದರ್ಶನ ನೀಡುತ್ತಿರುವುದು ವಿಚಾರವೆಂದರು. ಅವರು ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಮುಂಬರುವ ದಿನಗಳಲ್ಲಿ ಜಿಲ್ಲಾಡಳಿತದ ಸಹಕಾರದಿಂದ ಎ ಊ ಪಟೇಲ್ ಪ್ರತಿಮೆಯನ್ನು ಜಿಲ್ಲಾಡಳಿತದ ಆವರಣದಲ್ಲಿ ನಿರ್ಮಿಸಲಾಗುವುದೆಂದರು. ಇದಕ್ಕೆ ಜಿಲ್ಲೆಯ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಸಹಕರಿಸಬೇಕೆಂದು ವಿನಂತಿಸಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯಕ್ರಮಕ್ಕೆ ಕಲಾತಂಡಗಳನ್ನು ಪ್ರಯೋಜನೇ ಮಾಡಲಾಗಿತ್ತು.

ರಾಜ್ಯದ ವಿವಿಧ ಜಿಲ್ಲೆಗಳ ಸುಮಾರು 20ಕ್ಕೂ ಹೆಚ್ಚು ಕಲಾ ತಂಡಗಳು ಭಾಗವಹಿಸಿ ಸಾಂಸ್ಕೃತಿಕ ನೃತ್ಯ ವೈಭವದ ಪ್ರದರ್ಶನವನ್ನ ನೀಡಿದವು

ಕೊಪ್ಪಳದ ವಿದ್ಯಾ ಮಂಗಳೂರು ತಂಡದಿಂದ ಸಮೂಹ ನೃತ್ಯ

ಜೈ ವಿಹಾನ್ ಮಲ್ಲಿಕಾರ್ಜುನ್ ಮಠ ಬಿಜಾಪುರ್ ತಂಡದಿಂದ ನೃತ್ಯ ರೂಪಕ

ರುಕ್ಮಿಣಿ ಸುರ್ವೆ ಒ ಬೆಂಗಳೂರು ತಂಡದಿಂದ ಸಮೂಹ ನೃತ್ಯ

ಶಿಲ್ಪ ಮಂಗಳೂರು ತಂಡದಿಂದ ಜಾನಪದ ನೃತ್ಯ

ಬಸವರಾಜ್ ಸಿನ್ನೂರ್ ತಂಡ ಯಾದಗಿರಿ ಇಂದ ಸಮೂಹ ನೃತ್ಯ

ಅನುಪ್ ಕುಮಾರ ಹೊಸಪೇಟೆ ತಂಡದಿಂದ ಸುಗಮ ಸಂಗೀತ

ಬಾಬುಸಾಬ್ ಗಂಗಾವತಿ ತಂಡದಿಂದ ಕರಾಟೆ ಪ್ರದರ್ಶನ

ಅಂಬಿಕಾ ಮರಿಯಮ್ಮನಹಳ್ಳಿ ತಂಡದಿಂದ ನೃತ್ಯ ರೂಪಕ. ಕೊಪ್ಪಳ ಜಿಲ್ಲೆಯ ಜೂನಿಯರ್ ರಾಜ್ ಕುಮಾರ್ ಜೂನಿಯರ್ ವಿಷ್ಣುವರ್ಧನ್ ಜೂನಿಯರ್ ಶಿವರಾಜ್ ಕುಮಾರ್ ಅವರುಗಳಿಂದ ಚಲನಚಿತ್ರದ ನೃತ್ಯ ವೈಭವದ ಪ್ರದರ್ಶನಗಳುಇತರ ತಂಡಗಳ ವೇದಿಕೆಯ ನೃತ್ಯಗಳು ನೆರೆದಿದ್ದ ಪ್ರೇಕ್ಷಕರನ್ನ ರಂಚಿಸಿದವುಕೊಪ್ಪಳದ ಸಾಹಿತ್ಯ ಭವನದಲ್ಲಿ ನಡೆದ ಕೊಪ್ಪಳ ಜಿಲ್ಲಾ ಉತ್ಸವದ ಕಾರ್ಯಕ್ರಮದಲ್ಲಿ ಜಿಲ್ಲೆಯ ಯುವ ಸಾಹಿತಿ ಕಲಾವಿದರಿಗೆ ವೇದಿಕೆಯನ್ನು ಒದಗಿಸಿ ಪ್ರತಿಭಾವಂತ ಸಾಧಕರನ್ನ ಗೌರವಿಸಲಾಯಿತು

ಸಾಂಸ್ಕೃತಿಕ ಸಮ್ಮೇಳನದ ಸಮ್ಮೇಳನ ಅಧ್ಯಕ್ಷ ಯಲ್ಲಪ್ಪ ಬಡಿಗೇರವರು ಮೂಲತಹ ಕರಕುಶಲೆಯಲ್ಲಿ ಹಾಗೂ ಮರಗೆತ್ತನೆಯಲ್ಲಿ ವಿಶೇಷ ನೈಪುಣ್ಯತೆ ಪಡೆದಿರುವ ಕೊಪ್ಪಳದ ಭಾನಾಪುರದವರು ಈಗಾಗಲೇ ಸುಮಾರು ನೂರಕ್ಕೂ ಹೆಚ್ಚು ರಥಗಳನ್ನು ರಾಜ್ಯದ ವಿವಿದ ಜಿಲ್ಲೆಗಳಿಗೆ ಮಾಡಿಕೊಟ್ಟಿದ್ದಾರೆ.

ಅವರ ರಥ ಕ್ಷೇತ್ರದ ಸೇವೆಗಾಗಿ ಅವರಿಗೆ ಅನೇಕ ಪ್ರಶಸ್ತಿಗಳು ಲಭಿಸಿವೆ .

ಅವರ ರಥ ಶಿಲ್ಪಕ್ಷೇತ್ರದ

ಸೇವೆಯನ್ನ ಪರಿಗಣಿಸಿ ತಿರುಳುಗನ್ನಡ ಸಾಂಸ್ಕೃತಿಕ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಮಾಡಿದ್ದು ಅವರ ನೇತೃತ್ವದಲ್ಲಿ ಕಾರ್ಯಕ್ರಮ ನಡೆಸಿದ್ದು ಅಭಿನಂದನೆಯ ಎಂದು ಹಿರಿಯ ಪತ್ರಕರ್ತ ಪ್ರಾಸ್ತಾವಿಕವಾಗಿ ಮಾತನಾಡಿದರು.

ಹಿರಿಯ ಪತ್ರಕರ್ತ ಎಂ ಸಾಧಿಕ ಅಲಿ ಮಾತನಾಡುತ್ತಾ

ಎ ಊ ಪಟೇಲರು ಏಳು ಜಿಲ್ಲೆಗಳನ್ನ ತಮ್ಮ ಅವಧಿಯಲ್ಲಿ ರಚಿಸಿದರು ನಮ್ಮ ಕೊಪ್ಪಳ ಜಿಲ್ಲೆ ಮಾತ್ರ ನಿರಂತರವಾಗಿ ಜಿಲ್ಲಾ ಉತ್ಸವವನ್ನು ಮಾಡುತ್ತಾ ಬಂದಿದೆ . ಜಿಲ್ಲೆಯ ಜನಪ್ರತಿನಿಧಿಗಳು ರಾಜಕಾರಣಿಗಳು ಅಧಿಕಾರಿಗಳು ಜಿಲ್ಲಾ ಉತ್ಸವಕ್ಕೆ ಬೆಂಬಲಿಸಿ ಕೊಪ್ಪಳ ಜಿಲ್ಲೆಯನ್ನು ಅಭಿವೃದ್ಧಿಪಡಿಸುವಲ್ಲಿ ತಮ್ಮದೇ ಆದ ಯೋಜನೆಗಳನ್ನು ಹಾಕಿಕೊಂಡು ಮುನ್ನಡೆಸಬೇಕೆಂದು ವಿನಂತಿಸಿದ್ದರು

ತಿರುಳುಗನ್ನಡ ಸಾಂಸ್ಕೃತಿಕ ಸಮ್ಮೇಳನದಲ್ಲಿ ಹಿರಿಯ ಸಾಹಿತಿ ಮಹಾಂತೇಶ್ ಮಲ್ಲನ ಗೌಡ, ಹಿರಿಯ ಪತ್ರಕರ್ತ ವೈ ಬಿ ಜೂಡಿ, ಗೌರವಾಧ್ಯಕ್ಷ ಎಂ ಬಿ ಅಳವಂಡಿ, ಪತ್ರಕರ್ತರಾದ ಶಿವಕುಮಾರ್ ಹಿರೇಮಠ, ಉಮೇಶ್ ಪೂಜಾರ್, ಉದಯ್ ತೋಟದ, ಪ್ರಕಾಶ್ ಮಂಗಳೂರು, ಶ್ರೀಮತಿ ಕೋಮಲ ಕುದುರಿಮೋತಿ ಶ್ರೀಮತಿ ಅನ್ನಪೂರ್ಣ ಮನ್ನಾಪುರ ಮೇಘರಾಜ್ ಗೋನಾಳ್, ಅತಿಕ ಅಹಮದ್, ಮಹೀಬೂಬ ಖಾನ್ ಸೇರಿದಂತೆ ಇತರ ಯುವ ಕವಿಗಳು ಉಪಸ್ಥಿತರಿದ್ದರು.

# ಕಾಲಮಿತಿಯಲ್ಲಿ ಬೇಡಿಕೆಗಳನ್ನು ಈಡೇರಿಸದೇ ಇದ್ದಲ್ಲಿ ಶಿಕ್ಷಕರ ದಿನಾಚರಣೆ ಬಹಿಷ್ಕರಿಸಿ ಅನಿರ್ದಿಷ್ಟಾವದಿ ಮುಷ್ಕರ: ದೈಹಿಕ ಶಿಕ್ಷಣ ಶಿಕ್ಷಕರ ಸಂಘ ಎಚ್ಚರಿಕೆ: ಫ್ರೀಡಂ ಪಾರ್ಕನಲ್ಲಿ ಬೃಹತ್ ಪ್ರತಿಭಟನೆ

**ಬೆಂಗಳೂರು :** ಸಹಶಿಕ್ಷಕರಾಗಿ ಪರಿಗಣಿಸಿದ್ದರೂ ಮುಖ್ಯ ಶಿಕ್ಷಕರ ಮುಂಬಡ್ತಿ ಸೇರಿದಂತೆ ಸೌಲಭ್ಯಗಳನ್ನು ನೀಡುವುದು ಹಾಗೂ ಇನ್ನಿತರೆ ಹಲವಾರು ಬೇಡಿಕೆಗಳನ್ನು ಕಾಲಮಿತಿಯಲ್ಲಿ ಈಡೇರಿಸದೇ ಇದ್ದಲ್ಲಿ ಶಿಕ್ಷಕರ ದಿನಾಚರಣೆ ಬಹಿಷ್ಕರಿಸಿ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಮುಂದಾಗುವುದಾಗಿ ಕರ್ನಾಟಕ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘ ಎಚ್ಚರಿಕೆ ನೀಡಿದೆ.

ಇಂದು ನಗರದ ಫ್ರೀಡಂ ಪಾರ್ಕನಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಸಾವಿರಾರು ದೈಹಿಕ ಶಿಕ್ಷಣ ಶಿಕ್ಷಕರು ರಾಷ್ಟ್ರೀಯ ಕ್ರೀಡಾ ದಿನಾಚರಣೆಯ ಜೊತೆಯಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಕರ್ನಾಟಕ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಗೌರವ ಅಧ್ಯಕ್ಷರಾದ ಅರುಣ್ ಶಹಾಪೂರ್ ಅವರು ಮಾತನಾಡಿ, ಕಳೆದ 17 ವರ್ಷಗಳ ಹಿಂದೆಯೇ ಸಹಶಿಕ್ಷಕರನ್ನಾಗಿ ಪರಿಗಣಿಸುವ ಆದೇಶವನ್ನು ಸರಕಾರ ಮಾಡಿದೆ. ಆದರೆ, ಇದುವರೆಗೂ ಅದನ್ನು ಅನುಷ್ಠಾನಗೊಳಿಸದೇ ದೈಹಿಕ ಶಿಕ್ಷಣ ಶಿಕ್ಷಕರ ಮೇಲೆ ಮಲತಾಯಿ ಧೋರಣೆ ತೋರಿಸಲಾಗುತ್ತಿದೆ. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ದೈಹಿಕ ಶಿಕ್ಷಕರ ಪಾತ್ರ ಬಹಳ ಮುಖ್ಯವಾಗಿದೆ. ಆದ–'ರೆ ಬಹಳಷ್ಟು ಶಾಲೆಗಳಲ್ಲಿ ದೈಹಿಕ ಶಿಕ್ಷಕರ ನೇಮಕಾತಿಯೇ ನಡೆದಿಲ್ಲ. ಈ ಮಲತಾಯಿ ಧೋರಣೆಯನ್ನು ನಿಲ್ಲಿಸುವ ನಿಟ್ಟಿನಲ್ಲಿ ಇಲಾಖೆ ಸರಕಾರದ ಆದೇಶವನ್ನು ಈ ಕೂಡಲೇ ಅನುಷ್ಠಾನಗೊಳಿಸಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷರಾದ ಎಸ್ ಚೌಡಪ್ಪ ಮಾತನಾಡಿ, ಶಿಕ್ಷಣ ಶಿಕ್ಷಕರನ್ನು ಸಹ ಶಿಕ್ಷಕರೆಂದು ಇಲಾಖೆ ಪರಿಗಣಿಸಿದ್ದರೂ, ಇದುವರೆಗೂ ಮುಖ್ಯಶಿಕ್ಷಕರ ಮುಂಬಡ್ತಿ ಸೇರಿದಂತೆ ಸಹ ಶಿಕ್ಷಕರಿಗೆ ಸಿಗುವ ಸೌಲಭ್ಯಗಳನ್ನು ದೈಹಿಕ ಶಿಕ್ಷಣ ಶಿಕ್ಷಕರಿಗೆ ನೀಡುವ ಇಲಾಖಾ ಆದೇಶ ಅನುಷ್ಠಾನವಾಗಿಲ್ಲ. ಸಮಾನ ವೇತನ, ಸಮಾನ ವಿದ್ಯಾರ್ಹತೆ ಹಾಗೂ ಒಂದೇ ನೇಮಕಾತಿ ವಿಧಾನವಿದ್ದರೂ ಸಹ ಶಿಕ್ಷಕರು ಹಾಗೂ ದೈಹಿಕ ಶಿಕ್ಷಕರಲ್ಲಿ ತಾರತಮ್ಯ ಧೋರಣೆ ಮಾಡಲಾಗುತ್ತಿದೆ. ಇದರಿಂದ ಶಿಕ್ಷಕರಲ್ಲಿ ಅಸಮಾನತೆ ಉಂಟಾಗುತ್ತಿದೆ. ವೃತ್ತಿಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಾಗಿದ್ದ ಸಂಘದ ಮಹಾ



ಪೋಷಕರಾದ ವಿಧಾನಪರಿಷತ್ ಸಭಾಪತಿ ಶ್ರೀ ಬಸವರಾಜ ಹೊರಟ್ಟಿ ನೇತೃತ್ವದಲ್ಲಿ ಹಾಗೂ ವಿಧಾನಪರಿಷತ್ತಿನ ಶಿಕ್ಷಕರ ಹಾಗೂ ಪದವಿಧರ ಕ್ಷೇತ್ರದ ಶಾಸಕರ ಉಪಸ್ಥಿತಿಯಲ್ಲಿ ಸಾಕಷ್ಟು ಶಿಕ್ಷಣ ಸಚಿವರುಗಳಿಗೆ ಮನವಿ ಪತ್ರ ಸಲ್ಲಿಸಲಾಗಿದೆ. ಈ ಬಗ್ಗೆ ವಿಧಾನಸಭೆಯ ಸಭಾಧ್ಯಕ್ಷರಾದ ಯು.ಟಿ ಖಾದರ್ ಅವರೂ ಕೂಡಾ ಸಮಸ್ಯೆ ಬಗೆಹ–ರಿಸುವಂತೆ ಸರಕಾರಕ್ಕೆ ಟಿಪ್ಪಣಿ ನೀಡಿದ್ದಾರೆ. ಕೆಲವು ಬೇಡಿಕೆಗಳ ಈಡೇರಿಕೆಗೆ ಸರಕಾರದ ಮಟ್ಟದಲ್ಲಿ ಆದೇಶವಾಗಿದ್ದರೂ ಇಲಾಖೆಯಲ್ಲಿ ಅನುಷ್ಠಾನಗೊಳಿಸದೇ ಅನಗತ್ಯ ವಿಳಂಬ ಮಾಡಲಾಗುತ್ತಿದೆ. ವೃತ್ತಿಯಲ್ಲಿ ಬಡ್ತಿಯಿಲ್ಲದೇ ಇರುವ ಪ್ರಾಥಮಿಕ ಶಾಲಾ ಶಿಕ್ಷಕರು [ಗ್ರೇಡ್ –2] ಇವರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ದೈಹಿಕ ಶಿಕ್ಷಣ ಸಂಯೋಜಕರು, ದೈಹಿಕ ಶಿಕ್ಷಣ ಪರಿವೀಕ್ಷಕರ ಹುದ್ದೆ ಸೃಜಿಸಿ ಮುಂಬಡ್ತಿ ನೀಡಬೇಕು.

ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ದೈಹಿಕ ಶಿಕ್ಷಕರ ಹುದ್ದೆ ನಿಗದಿಪಡಿಸುವುದು ಸರಿಯಲ್ಲ. ದೈಹಿಕ ಶಿಕ್ಷಕರ ಉನ್ನತ ವ್ಯಾಸಂಗಕ್ಕೆ ವೇತನ ಸಹಿತ ಅನುಮತಿ ನೀಡಬೇಕು. ಪ್ರತ್ಯೇಕ ದೈಹಿಕ ಶಿಕ್ಷಣ ನಿರ್ದೇಶನಾಲಯ ಸ್ಥಾಪಿಸಬೇಕು ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಸರಕಾರದ ಆದೇಶದಂತೆ ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳ ಸೃಜನೆಯಾಗಬೇಕು ಎಂದು ಅವರು ಒತ್ತಾಯಿಸಿದರು.

ಕಾಲಮಿತಿಯಲ್ಲಿ ನಮ್ಮ ಬೇಡಿಕೆಗಳನ್ನು ಈಡೇ–ರಿಸದೇ ಇದ್ದಲ್ಲಿ ಶಿಕ್ಷಕರ ದಿನಾಚರಣೆಯನ್ನು ಬಹಿಷ್ಕರಿಸುವ ಮೂಲಕ ಅನಿರ್ದಿಷ್ಟಾವಧಿ ಮುಷ್ಕರಕ್ಕಿಳಿಯುವನಿರ್ಧಾರಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು.

ಕರ್ನಾಟಕ ಸರಕಾರದ ದೆಹಲಿ ಪ್ರತಿನಿಧಿಯಾಗಿರುವ ಪ್ರಕಾಶ್ ಹುಕ್ಕೇರಿ ಅವರು ಪ್ರತಿಭಟನಾ ನಿರತ ದೈಹಿಕ ಶಿಕ್ಷಣ ಶಿಕ್ಷಕರಿಂದ ಮನವಿ ಸ್ವೀಕರಿಸಿ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಶೀಘ್ರದಲ್ಲಿ ಬೇಡಿಕೆಗಳನ್ನು ಈಡೇ–ರಿಸುವ ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಜೆ.ಚಂದ್ರಶೇಖರ್, ಖಜಾಂಚಿ ಡಿ.ವಿ ಬಾಲರಾಜ್, ಕಾರ್ಯಾಧ್ಯಕ್ಷ ಪಿ.ಡಿ ಕಾಗೋಡ್ ಉಪಾಧ್ಯಕ್ಷರಾದ ಅನಿಲ್ ಯು. ಆರ್, ಕೆ.ಎಸ್ ಶಾಸ್ತ್ರಿ, ಎಂ ಗೋಪಾಲ್, ಎಂ ಸದಾನಂದ, ರಾಜಾರಾಂ ಶೆಟ್ಟಿ, ಬೆಂಗಳೂರು ವಿಭಾಗೀಯ ಕಾರ್ಯಾಧ್ಯಕ್ಷ ಆರ್. ವಿಜಯ್ ಕುಮಾರ್, ತ್ಯಾಗಂ ಹರೇಕಳ, ಶಹಿನಾ ಎಫ್, ಮಲ್ಲಿಕಾರ್ಜುನ ಟಂಕಸಾಲೆ, ಕಾರ್ಯದರ್ಶಿ ಶ್ರೀಮತಿ ನಗೀನಾ ಖಾನಂ, ವಿಜಯಲಕ್ಷ್ಮಿ ಭಟ್, ಬೆಂಗಳೂರು ದಕ್ಷಿಣ ಹಾಗೂ ಉತ್ತರ ಜಿಲ್ಲಾ ಅಧ್ಯಕ್ಷರಾದ ಅಸ್ಲಾಂ ಪಾಷ, ಸುರೇಶ್ ಹಾಗೂ ರಾಜ್ಯ ಸಂಘದ ಪದಾಧಿಕಾರಿಗಳಾದ ಶ್ರೀರಾಮಯ್ಯ, ಕೌಶಲ್ಯಾರಾಣೀ, ಸೌಭಾಗ್ಯ, ಆರೋಗ್ಯಸ್ವಾಮಿ ಪ್ರಕಾಶ್ ಸೇರಿದಂತೆ ಎಲ್ಲಾ ಜಿಲ್ಲೆಗಳ ಜಿಲ್ಲಾಧ್ಯಕ್ಷರುಗಳು ಹಾಗೂ ಐದು ಸಾವಿರಕ್ಕೂ ಹೆಚ್ಚು ದೈಹಿಕ ಶಿಕ್ಷಕರು ಪಾಲ್ಗೊಂಡಿದ್ದರು.

# ಪ್ರಮುಖ ಪ್ರವಾಸಿ ತಾಣಗಳಿಗೆ ವೋಟ್ ಮಾಡುವ ಕಾರ್ಯಕ್ರಮ

**ಬಾಗಲಕೋಟೆ :** ಪ್ರವಾಸೋದ್ಯಮವನ್ನು ಇನ್ನಷ್ಟು ಮೇಲ್ದರ್ಜೆಗೇರಿಸಲು ಹಾಗೂ ಧಾರ್ಮಿಕ, ಸಾಂಸ್ಕೃತಿಕ, ಪಾರಂಪರಿಕ, ನೈಸರ್ಗಿಕ ಹಾಗೂ ವನ್ಯಜೀವಿ ಮತ್ತು ಸಾಹಸ ಚಟುವಟಿಕೆಗಳು ಹಾಗೂ ಇತರೆ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ದೃಷ್ಟಿಕೋನದಲ್ಲಿ ಪ್ರಮುಖ ತಾಣಗಳನ್ನು ಗುರುತಿಸಿ ವಿಶ್ವ ದರ್ಜೆಯಲ್ಲಿ ಅಭಿವೃದ್ಧಿಪಡಿಸಲು ಕೇಂದ್ರ ಪ್ರವಾಸೋದ್ಯಮ ಸಚಿವಾಲಯದಿಂದ ದೇಕೋ ಅಪ್ನಾ ದೇಶ, ಪೀಪಲ್ಸ್ ಚಾಯ್ಸ–2024 ಎಂಬ ಕಾರ್ಯಕ್ರಮ ಪ್ರಾರಂಭಿಸಿದೆ. ಸದರಿ ಕಾರ್ಯಕ್ರಮದ ಭಾಗವಾಗಿ ನಾಗರಿಕರು, ಪ್ರವಾಸಿಗರು ಆದ್ಯತೆಯ ಪ್ರವಾಸಿ ತಾಣಗಳನ್ನು ಆಯ್ಕೆ ಮಾಡಲು ಮೈಗರ್ವಮೆಂಟರ್ ವೇದಿಕೆಯಡಿ ಅವಕಾಶ ಕಲ್ಪಿಸಲಾಗಿದೆ. ಸೆಪ್ಟೆಂಬರ 15 ವರೆಗೆ ಓಟ್ ಮಾಡುವ ಅವಕಾಶ ನೀಡಿದೆ. ಸದರಿ ಕ್ಯಾಂಪೇನ್ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆಯ ಪ್ರವಾಸಿ ತಾಣಗಳಾದ ಬಾದಾಮಿ, ಐಹೊಳೆ, ಪಟ್ಟದಕಲ್ಲ, ಕೂಡಲ ಸಂಗಮ ಮತ್ತು ಇತರೆ ಪ್ರವಾಸಿ ತಾಣಗಳನ್ನು ಆಯ್ಕೆ ಮಾಡಲು ಆಯ್ಕೆಗೆ http://innovateindia.mygov.in/dekho-apna-desh/ ಈ ಲಿಂಕ್ ಬಳಸಿ ವೋಟ್ ಮಾಡುವಂತೆ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯಾರ್ಥಿಗಳು ಓದುವ ಅಭಿರುಚಿಯನ್ನು ಬೆಳೆಸಿಕೊಳ್ಳಬೇಕು: ಡಾ. ಹೊಸಪ್ಯಾಟಿ

**ಹುನಗುಂದ :** ವಿದ್ಯಾರ್ಥಿಗಳು ಓದುವ ಅಭಿರುಚಿಯನ್ನುಬೆಳೆಸಿಕೊಂಡು.ನಿರಂತರವಾಗಿ ಗುರಿಯ ಸಾಧನೆಗಾಗಿ ಪ್ರಯತ್ನಿಸುತ್ತ ತಮ್ಮ ಗುರಿ ಈಡೇರಿಸಿಕೊಳ್ಳಬೇಕೆಂದು ವಿಶ್ರಾಂತ ಜಿಲ್ಲಾ ಉಪಯೋಜನಾ ಸಮನ್ವಯ ಅಧಿಕಾರಿ ಡಾ. ಲಲಿತಾ ಹೊಸಪ್ಯಾಟಿ ಹೇಳಿದರು.

ಪಟ್ಟಣದ ಎಸ್.ಆರ್. ವಸ್ತ್ರದ ಕಲಾ, ವಿಜ್ಞಾನ ಮತ್ತು ವ್ಹಿ.ಎಸ್. ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡ ಪ್ರತಿಭಾ ಪುರಸ್ಕಾರ ಹಾಗೂ ಪದವಿ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಶುಭ ಕೋರುವ ಸಮಾರಂಭದ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.

ಬಸವ ತತ್ವವನ್ನು ಮೈಗೂಡಿಸಿಕೊಂಡು ಸ್ಥಾಪನೆಯಾದ ಈ ಮಹಾವಿದ್ಯಾಲಯದಲ್ಲಿ ವಿದ್ಯಾರ್ಜನೆಮಾಡಿದಸಾವಿರಾರುವಿದ್ಯಾರ್ಥಿಗಳು ದೇಶ–ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಹಾಗೆ. ಇಲ್ಲಿ ನೆರೆದ ಎಲ್ಲ ವಿದ್ಯಾರ್ಥಿಗಳು ಸತತ ಅಧ್ಯಯನಶೀಲರಾಗಿ ಜೀವನ ಕೌಶಲ್ಯಗಳನ್ನು ಬೆಳೆಸಿಕೊಂಡು, ಜಾಗತೀಕರಣ ಒಡ್ಡುವ ಸವಾಲುಗಳನ್ನು ಎದುರಿಸಿ ಗಟ್ಟಿ–ಮುಟ್ಟಾಗಿ ನಿಲ್ಲಬೇಕೆಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಮಹಾವಿದ್ಯಾಲಯದ ಪ್ರಾಚಾರ್ಯೆ ಶಶಿಕಲಾ ಮಠ ಮಾತನಾಡಿ. ಓದುವುದು ಒಂದು



ಹವ್ಯಾಸವಾಗಬೇಕು, ಆದ್ದರಿಂದ ವಿದ್ಯಾರ್ಥಿಗಳು ತಮ್ಮ ಆಲೋಚನೆಗಳನ್ನು ಬೆಳೆಸಿಕೊಂಡು ಸಮಾಜಮುಖಿಯಾಗಿ ಚಿಂತನೆಗೈಯ್ಯಬೇಕು ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಬೇಕೆಂದು ಸಲಹೆ ನೀಡಿದರು. ಕ್ರೀಡಾ ಸಾಧಕ ವಿದ್ಯಾರ್ಥಿಗಳಾದ ಮಹಾಂತೇಶ ಬೆಳ್ಳಿಹಾಳ, ಕಲಂದರ ಬದಾಮಿ, ಮೇಘನಾಥ ದಂಡಗಿ, ಎನ್.ಸಿ.ಸಿ , ಎನ್.ಎಸ್.ಎಸ್. ಭಾರತ್ ಸ್ಕೌಟ್ಸ್ ಗೈಡ್ಸ್ ವಿಭಾಗಗಳಲ್ಲಿ ಸಾಧನೆಗೈದ ಹಾಗೂ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳನ್ನು ಇದೆ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಅಭಿಷೇಕ ಮುಡಪಲದಿನ್ನಿ ಪ್ರಾರ್ಥಿಸಿದರು. ಕ್ರೀಡಾ ನಿರ್ದೇಶಕ ಎಸ್.ಬಿ. ಚಳಗೇರಿ ಸ್ವಾಗತಿಸಿದರು. ಐಕ್ಯೂಎಸಿ ಸಂಯೋಜಕ ಡಾ. ಎಸ್.ಆರ್. ಗೋಲಗೊಂಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ತಿಪ್ಪೇಸ್ವಾಮಿ ಪರಿಚಯಿಸಿದರು. ಕಾಲೇಜು ಒಕ್ಕೂಟದ ಕಾರ್ಯಾಧ್ಯಕ್ಷ ಡಾ. ಪರಶುರಾಮ ಹಾದಿಮನಿ ವರದಿ ವಾಚಿಸಿದರು. ವಿದ್ಯಾ ಗೋಲಪ್ಪನವರು ವಂದಿಸಿದರು. ಡಾ. ಎಂ. ಬಿ. ಒಂಟಿ ಹಾಗೂ ಶ್ರೀನಿಧಿ. ಆರ್.ಎ ನಿರೂಪಿಸಿದರು.

# ತಮಟಗಾರರವರ ಮನೆ ಹಾಗೂ ಕುಟುಂಬಸ್ಥರ ಮೇಲೆ ನಡೆದ ದಾಳಿ: ತೀವ್ರ ಖಂಡನೀಯ



**ಹುನಗುಂದ :** ಧಾರವಾಡದ ಅಂಜುಮನ್ ಇಸ್ಲಾಂ ಸಂಸ್ಥೆಯ ಅಧ್ಯಕ್ಷ ಇಸ್ಮಾಯೀಲ್ ತಮಟಗಾರ ರವರ ಮನೆ ಹಾಗೂ ಕುಟುಂಬಸ್ಥರ ಮೇಲೆ ನಡೆದ ದಾಳಿಯನ್ನು ಕರ್ನಾಟಕ ಮುಸ್ಲಿಂ ಯುನಿಟಿ ಅಧ್ಯಕ್ಷ ಜಬ್ಬಾರ ಕಲಬುರ್ಗಿ ತೀವ್ರವಾಗಿ ಖಂಡಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಇಂತಹ ಸಮಾಜ ವಿರೋಧಿ ಕೃತ್ಯಗಳನ್ನು ತಡೆಯಲು ಅವಳಿ ನಗರದ ಪೊಲೀಸರು ಮುಂದಾಗಬೇಕು. ಇಸ್ಮಾಯೀಲ್ ತಮಟಗಾರರ ಮನೆ ಹಾಗು ಕುಟುಂಬಸ್ಥರ ಮೇಲೆ ನಡೆದ ದಾಳಿಯ ಕುರಿತು ಸೂಕ್ತ ಹಾಗು ಶೀಘ್ರವಾಗಿ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಅವಳಿ ನಗರದ ಪೊಲೀಸ್ ಆಯುಕ್ತರು ಹಾಗು ಸಂಬಂಧಪಟ್ಟ ಅಧಿಕಾರಿಗಳಿಗೆ ಒತ್ತಾಯಿಸಿದ್ದಾರೆ. ಈ ಹಿಂದೆಯೂ ಸಹ ಇವರ ಮೇಲೆ ಹತ್ಯೆಗೆ ಯತ್ನನಡೆದಿದ್ದು, ಇವರ ಹಾಗು ಕುಟುಂಬಕ್ಕೆ ಜೀವ ಭಯ ಇರುವುದರಿಂದ ಸೂಕ್ತ ರಕ್ಷಣೆ ಒದಗಿಸಬೇಕು. ಈ ಕೃತ್ಯ ಮಾಡಿರುವ ಹಾಗು ಈ ಕುತಂತ್ರದ ಹಿಂದೆ ಯಾರು ಇದ್ದಾರೆಂಬುದನ್ನು ಪೋಲೀಸರು ತನಿಖೆ ನಡೆಸಿ ಪತ್ತೆ ಹಚ್ಚಿ ಸೂಕ್ತ ಕಾನೂನು ಕ್ರಮವನ್ನು ಅತಿ ಶೀಘ್ರವಾಗಿ ಕೈಗೊಳ್ಳಬೇಕು. ಇಲ್ಲವಾದಲ್ಲಿ ಅವಳಿ ನಗರದ ಪೊಲೀಸ್ ಇಲಾಖೆಯ ವಿರುದ್ಧ ರಾಜ್ಯದಾದಂತ್ಯ ಕರ್ನಾಟಕ ಮುಸ್ಲಿಂ ಯುನಿಟಿ. ಹೋರಾಟ ನಡೆಸುತ್ತದೆ ಎಂದು ಪ್ರಕಟಣೆಯಲ್ಲಿ ಎಚ್ಚರಿಸಿದ್ದಾರೆ.

# ಡಾ. ಹನುಮಂತನಾಥ ಮಹಾಸ್ವಾಮಿಗಳ ಸಾಧನೆಯ ಕಿರೀಟಕ್ಕೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ಸಿಂಡಿಕೇಟ್ ಸದಸ್ಯತ್ವದ ಗರಿ



**ಪಾವಗಡ :** ತಾಲ್ಲೂಕಿನ ದವಡಬೆಟ್ಟ ಎಂಬ ಕುಗ್ರಾಮದಲ್ಲಿ ಪೂಜಾರ್ ನಾಗಪ್ಪ – ರಾಮಕ್ಕ ದಂಪತಿಗಳಿಗೆ ಜನಿಸಿದ ಹನುಮಂತ, ಬಾಲ್ಯದಲ್ಲೇ 'ನಾನು ಮುಂದೆ ಸನ್ಯಾಸಿಯಾಗುತ್ತೇನೆ' ಎಂದು ಹೇಳುತ್ತಾ; ವರ್ಷಕ್ಕೊಮ್ಮೆ ಮನೆದೇವರಿಗೆ ಮುಡಿ ಕೊಟ್ಟಾಗ, ಬೋಡು ತಲೆಗೆ ಕೆಂಪು ವಸ್ತ್ರವನ್ನು ಸುತ್ತಿಕೊಂಡು, ಕೈಯಲ್ಲೊಂದು ಕೋಲು ಹಿಡಿದುಕೊಂಡು 'ನಾನು ಶಂಕರಾಚಾರ್ಯ' ಎಂದು ಹೇಳಿಕೊಳ್ಳುತ್ತಾ; ಈರುಳ್ಳಿ, ಬೆಳ್ಳುಳ್ಳಿ ಸೇವಿಸುವುದನ್ನು ತ್ಯಜಿಸಿ, ಪ್ರತಿದಿನ ಐದು ಗಂಟೆಗೆ ಎದ್ದು ತಣ್ಣೀರು ಸ್ನಾನ ಮಾಡುತ್ತಾ; ದೇವಿ ಆರಾಧನೆಯಲ್ಲಿ ಮೈಮರೆಯುತ್ತಾ; ಜೊತೆಗಾರರಿಂದ ಹುಚ್ಚ, ತಿಕ್ಕಲ ಎಂದು ಅಣಕಿಸಿಕೊಳ್ಳುತ್ತಾ ಬೆಳೆದ ಬಾಲಕ........


ಕಿತ್ತು ತಿನ್ನುವ ಬಡತನವನ್ನು ಮೀರಿ, ತಲುಪಿ ಆದಿಚುಂಚನಗಿರಿ, ಸಂಸ್ಕೃತ ಪಾಠಶಾಲೆಗೆ ಸೇರಿ, ಚುಂಚನಗಿರಿಯಲ್ಲಿ ತಳವೂರಿ, 'ಸಂಸಾರ ನಿಸ್ಸಾರ, ಸನ್ಯಾಸ ವಿಕಾಸ' ಎಂಬ ಸಿದ್ಧಾಂತದ ಬೆನ್ನೇರಿ, ಆಧ್ಯಾತ್ಮಿಕತೆಯ ರಥವೇರಿ, ಸನ್ಯಾಸತ್ವವ ಸ್ವೀಕರಿಸಿದ ಯುವಕ.....

ದಾರಿ ಯಾವುದಯ್ಯ ಬೆಳಕಿನರಮನೆಗೆ? ಎಂದು ಅರಸಿ, ಶ್ರೀ ವಡ್ಡಗೆರೆ ವೀರನಾಗಮ್ಮನ ಕೃಪಾಶೀರ್ವಾದ ಬಯಸಿ, ದಾನಿ ದೇವರಾಜಯ್ಯನವರ ಆಹ್ವಾನ ಸ್ವೀಕರಿಸಿ, ಮಠ ಪರಂಪರೆಯ ಆದರ್ಶ ಪಾಲಿಸಿ, ತುಮಕೂರು ಜಿಲ್ಲೆ, ಕೊರಟಗೆರೆ ತಾಲೂಕಿನ ಎಲೇ ರಾಂಪುರದಲ್ಲಿ ಶ್ರೀ ಕುಂಚಿಟಿಗರ ಮಹಾ ಸಂಸ್ಥಾನ ಮಠ ಸ್ಥಾಪಿಸಿ, ಎಲ್ಲ ಸಮುದಾಯದ ಮಕ್ಕಳನ್ನು ಪೋಷಿಸಿ, ಮಠವನ್ನು ಅಭಿವೃದ್ಧಿಪಡಿಸಿ, ಸಮಾಜ ಸೇವೆಗೆ ಜೀವನವನ್ನೇ ಮುಡುಪಾಗಿಸಿದ ಕಾಯಕ ಯೋಗಿ. ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ ಹನುಮಂತನಾಥ ಮಹಾಸ್ವಾಮಿಗಳು, ಇದೀಗ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ನೇಮಕವಾಗಿರುತ್ತಾರೆ. ಅವರಿಗೆ ಮಠದ ಸದ್ಭಕ್ತರ ಪರವಾಗಿ ಹಾಗೂ ಕನ್ನಡಿಗರೆಲ್ಲರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸೋಣ. ನಾಡಿಗೆ ಅವರ ಸೇವೆ ಇನ್ನಷ್ಟು ದೊರಕಲಿ ಎಂದು ಆಶಿಸೋಣ.

ಹಾಗೆಯೇ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ನಾಮ ನಿರ್ದೇಶಿತ ಸದಸ್ಯರನ್ನಾಗಿ ಪರಮಪೂಜ್ಯ ಶ್ರೀ ಶ್ರೀ ಶ್ರೀ ಡಾ. ಹನುಮಂತನಾಥ ಸ್ವಾಮೀಜಿಯವರನ್ನು ಆಯ್ಕೆ ಮಾಡಿದ ಕರ್ನಾಟಕ ಸರ್ಕಾರದ ಗೃಹ ಸಚಿವರಾದ ಮಾನ್ಯ ಡಾ. ಜಿ ಪರಮೇಶ್ವರ ರವರಿಗೆ ಮಠದ ಭಕ್ತರ ಪರವಾಗಿ ಧನ್ಯವಾದಗಳನ್ನು ಅರ್ಪಿಸೋಣ.

**–ಮಣ್ಣೆ ಮೋಹನ್**

# ಇಂದು ಡಯಾಲಿಸಿಸ್ ಕೇಂದ್ರದ ಉದ್ಘಾಟನೆ



**ರಬಕವಿ–ಬನಹಟ್ಟಿ :** ಆಗಸ್ಟ್ 30 ರಂದು ಶುಕ್ರವಾರ ಬೆಳಿಗ್ಗೆ ಹತ್ತಕ್ಕೆ ರಬಕವಿ ಬನಹಟ್ಟಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಡಯಾಲಿಸಿಸ್ ಕೇಂದ್ರದ ಉದ್ಘಾಟನೆಯನ್ನು ಶಾಸಕ ಸಿದ್ದು ಸವದಿ ನೆಲವೇರಿಸಲಿದ್ದಾರೆಂದು ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಎನ್. ಎಂ. ನದಾಫ್ ತಿಳಿಸಿದರು.

ಗುರುವಾರ ಡಯಾಲಿಸಿಸ್ ಕೇಂದ್ರದಲ್ಲಿ ಯಂತ್ರಗಳ ಅಳವಡಿಕೆಯ ಕಾರ್ಯವನ್ನು ಪರಿಶೀಲನೆ ಮಾಡಿ ಪತ್ರಿಕೆಯ ಜೊತೆಗೆ ಅವರು ಮಾತನಾಡಿದರು.

ಇದು ಸಂಪೂರ್ಣವಾಗಿ ಉಚಿತವಾಗಿದ್ದು, ಇಲ್ಲಿ ಎರಡು ಯಂತ್ರಗಳನ್ನು ಅಳವಡಿಸಲಾಗಿದೆ. ದಿನಾಲು ನಾಲ್ಕು ಜನರಿಗೆ ಡಯಾಲಿಸಿಸಗಾಗಿ ಅವಕಾಶ ಮಾಡಿಕೊಡಲಾಗುವುದು ಎಂದು ಡಾ. ನದಾಫ್ ತಿಳಿಸಿದರು. ಕೇಂದ್ರದ ಸಂಯೋಜನಾಧಿಕಾರಿ ಗೋಪಾಲ ಕರಜಗಿ ಮಾತನಾಡಿ, ದೆಹಲಿಯ ಡಿಸಿಡಿಸಿ ಕಿಡ್ನಿ ಕೇರ್ ಕೇಂದ್ರದ ಆಶ್ರಯದಲ್ಲಿ ಇದನ್ನು ನಿರ್ಮಾಣ ಮಾಡಲಾಗುತ್ತಿದೆ. ಅಂದಾಜು ರೂ. 20 ಲಕ್ಷ ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿದೆ. ಇಲ್ಲಿ ಡಯಾಲಿಸಿಸ್ ಕೇಂದ್ರಕ್ಕೆ ಬೇಕಾಗುವ ಶುದ್ಧ ಕುಡಿಯುವ ನೀರಿನ ಆರ್. ಓ. ಘಟಕವನ್ನು ಕೂಡಾ ಮಾಡಲಾಗಿದೆ ಎಂದರು.

ಆಸ್ಪತ್ರೆಯ ಅಧೀಕ್ಷಕಿ ಸ್ಮಿತಾ ಕಾಳಗಿ ಸೇರಿದಂತೆ ಅನೇಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ದಾನಮ್ಮದೇವಿ ದೇವಸ್ಥಾನ: ಹರಿದು ಬಂದ ಭಕ್ತ ಸಾಗರ

**ರಬಕವಿ :** ಇಲ್ಲಿನ ದಾನಮ್ಮ ದೇವಿ ದೇವಸ್ಥಾನದಲ್ಲಿ ಶ್ರಾವಣ ಮಾಸದ ಕೊನೆಯ ಗುರುವಾರದಂದು ಪೂಜಾ ಮುಕ್ತಾಯದ ಸಮಾರಂಭಕ್ಕೆ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಸೇರಿದ್ದರು. ಬೆಳಿಗ್ಗೆ ಐದು ಗಂಟೆಗೆ ಭಕ್ತಾದಿಗಳು ಆಗಮಿಸಿದ್ದರು.

ಬೆಳಿಗ್ಗೆ ದೇವಸ್ಥಾದಲ್ಲಿ ವಿಶೇಷ ಪೂಜೆ, ಪಲ್ಲಕ್ಕಿ ಸೇವೆ ನಡೆಯಿತು. ನಂತರ ದಾನಮ್ಮ ದೇವಿಗೆ ಬಂಗಾರದ ಮುಖದ ಮತ್ತು ಮುತ್ತಿನ ಹಾರಗಳು ಮತ್ತು ಹೂ ಮಾಲೆಗಳಿಂದ ಅಲಂಕಾರ ಮಾಡಲಾಗಿತ್ತು.





ದೇವಸ್ಥಾನದಲ್ಲಿ ವಿವಿಧ ಮಹಿಳಾ ಸಂಘಟನೆಗಳು ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯವನ್ನು ಕೈಗೊಂಡರು. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಪ್ರಸಾದ ವ್ಯವಸ್ಥೆಯನ್ನು ಕೈಗೊಳ್ಳಲಾಗಿತ್ತು. ದಾನಮ್ಮ ದೇವಿ ಟ್ರಸ್ಟ್ ಅಧ್ಯಕ್ಷ ಶಿವಜಾತ ಗುರುಲಿಂಗಪ್ಪ ಉಮದಿ, ನಾರಾಯಣ ಬೋರಗಿನಾಯಕ, ಪ್ರಭು ಉಮದಿ, ಈರಣ್ಣ ಗುಣಕಿ, ಡಾ. ಸಂಗಮೇಶ ಹತಪಕಿ, ಧರೆಪ್ಪ ಉಳ್ಳಾಗಡ್ಡಿ, ಉದಯ ಜಿಗಜಿನ್ನಿ, ರಾಜು ಉಮದಿ, ಡಾ. ರವಿ ಜಮಖಂಡಿ, ಸಂಜಯ ಮುತ್ತೂರ, ಮಲ್ಲಿಕಾರ್ಜುನ ಉರಭಿನವರ, ಬಸವರಾಜ ತೊರಲಿ, ಅಂದಾನಿ ಮುತ್ತೂರ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

# ಮತ್ತೇ ಆರ್ಭಟಿಸುತ್ತಿರುವ ಕೃಷ್ಣಾ ನದಿ

## ಹಿಪ್ಪರಗಿ ಜಲಾಶಯಕ್ಕೆ 1,13,763 ಕ್ಯೂಸೆಕ್ ಒಳ ಹರಿವು





**ರಬಕವಿ–ಬನಹಟ್ಟಿ :** ಇತ್ತೀಚೆಗೆ ಪ್ರವಾಹದ ಭೀತಿಯಿಂದ ನಿರಾಳತೆ ಕಂಡಿದ್ದ ಕೃಷ್ಣಾ ನದಿ ಪಾತ್ರದ ಗ್ರಾಮಸ್ಥರಿಗೆ ಇದೀಗ ಮತ್ತೇ ಪ್ರವಾಹದ ಆತಂಕ ಶುರುವಾಗಿದ್ದು , ಜನರು ತಮ್ಮ ಜಾನುವಾರುಗಳ ಸಮೇತ ಸುರಕ್ಷಿತ ಸ್ಥಳದತ್ತ ತೆರಳುತ್ತಿದ್ದಾರೆ.

ಮಹಾರಾಷ್ಟ್ರದ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದ ಹಾಗೂ ಮಹಾರಾಷ್ಟ್ರದ ವಿವಿಧ ಜಲಾಶಯಗಳಿಂದ ನೀರು ಹರಿ ಬಿಡುತ್ತಿರುವುದರಿಂದ ಕೃಷ್ಣಾ ನದಿ ಮತ್ತೇ ಆರ್ಭಟಿಸುತ್ತಿದೆ. ಬಿರುಬಿಸಿಲಿಗೆ ಸೋತು ಸೊರಗಿದ್ದ ಕೃಷ್ಣಾ ನದಿ ಇದೀಗ ವರುಣನ ಕೃಪೆಯಿಂದ ಒಡಲು ತುಂಬಿ ಹರಿಯುತ್ತಿದೆ.

ಹಿಪ್ಪರಗಿ ಬ್ಯಾರೇಜಕ್ಕೆ ಗುರುವಾರ ಬೆಳಿಗ್ಗೆ 1,13,763 ಕ್ಯೂಸೆಕ್ ಒಳ ಹರಿವು ಇದ್ದು, 1,13,013 ಹೊರ ಹರಿವು ದಾಖಲಾಗಿದೆ. ಇದು ಇನ್ನೂ ಹೆಚ್ಚಳವಾಗುವ ಸಾಧ್ಯತೆ ಇದೆ.

ಮಹಾರಾಷ್ಟ್ರದ ಕೃಷ್ಣಾ ಜಲಾನಯನ ಪ್ರದೇಶಗಳಲ್ಲಿ ಮಳೆ ಬೀಳುತ್ತಿರುವುದರಿಂದ ಮತ್ತು ಅಲ್ಲಿಯ ವಿವಿಧ ಜಲಾಶಯಗಳಿಂದ ಅಪಾರ ಪ್ರಮಾಣದಲ್ಲಿ ನೀರನ್ನು ಹರಿ ಬಿಡುತ್ತಿರುವುದರಿಂದ ಕೃಷ್ಣಾ ನದಿಯಲ್ಲಿ ಮತ್ತೆ ನೀರಿನ ಪ್ರಮಾಣ ಹೆಚ್ಚಾಗಿದೆ.

ಗುರುವಾರ ಕಲ್ಲೋಳ ಬ್ಯಾರೇಜ್ ನಿಂದ 99,917 ಕ್ಯೂಸೆಕ್ ಮತ್ತು ದೂಧಗಂಗಾ ನದಿಯಿಂದ 26,400 ಕ್ಯೂಸೆಕ್ ಸೇರಿದಂತೆ ಒಟ್ಟು 1,26,317 ಕ್ಯೂಸೆಕ್ ನೀರು ಕೃಷ್ಣಾ ನದಿಗೆ ಹರಿದು ಬರುತ್ತಿದೆ. ಗುರುವಾರ 12,554 ಕ್ಯೂಸೆಕ್ ಒಳ ಹರಿವು ಹೆಚ್ಚಾಗಿದೆ. ಮಹಾರಾಷ್ಟ್ರದ ಕೃಷ್ಣಾ ಜಲಾನಯನ ಪ್ರದೇಶಗಳಾದ ಕೊಯ್ನಾ: 86 ಮಿ.ಮೀ, ನವುಜಾ: 94 ಮಿ.ಮೀ, ಮಹಾಬಳೇಶ್ವರ: 87 ಮಿ.ಮೀ, ವಾರಣಾ, ರಾಧಾನಗರಿ, ದೂಧಗಂಗಾ, ತಾರಳಿ ಸೇರಿದಂತೆ ಅನೇಕ ಕಡೆಗಳಲ್ಲಿ ಉತ್ತಮ ಮಳೆಯಾಗಿದ್ದರಿಂದ ಕೃಷ್ಣಾ ನದಿಯ ಒಳ ಹರಿವು ಹೆಚ್ಚಾಗಿದೆ ಎಂದು ತಹಶೀಲ್ದಾರ್ ಗಿರೀಶ ಸ್ವಾದಿ ತಿಳಿಸಿದ್ದಾರೆ.

ಈಗಾಗಲೇ ಕುಡಚಿ ಸೇತುವೆ ನೀರಿನಲ್ಲಿ ಮುಳುಗಿದ್ದರಿಂದ ಮಹಾರಾಷ್ಟ್ರದ ಮಿರಜಕ್ಕೆ ಹೋಗಲು ರೈಲು ಮಾರ್ಗದ ಪ್ರವಾಸ ಅನಿವಾರ್ಯವಾಗಿದೆ. ಇದೀಗ ತಾಲೂಕಿನ ಅಸ್ಕಿ ಗ್ರಾಮದಲ್ಲಿ ಪ್ರವಾಹದ ನೀರು ಸುತ್ತುವರೆಯುವ ಎಲ್ಲ ಲಕ್ಷಣಗಳಿದ್ದು , ಮುಂಜಾಗ್ರತಾ ಕ್ರಮವಾಗಿ ಅಧಿಕಾರಿಗಳ ತಂಡ ಗ್ರಾಮಸ್ಥರಿಗೆ ಜಾಗರೂಕತೆ ಇರುವಂತೆ ಎಚ್ಚರಿಕೆ ನೀಡಿದ್ದಾರೆ.

# ವೇಷಭೂಷಣ ಸ್ಪರ್ಧೆ



**ಮುಂಡಗೋಡ :** ನವಚೇತನ ಯುವಕ ಮಂಡಳ ಟ್ರಸ್ಟ್(ರಿ) ಗಾಂಧಿನಗರ ಮುಂಡಗೋಡ ಇವರ ಆಶ್ರಯದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯ ಅಂಗವಾಗಿ ಪಟ್ಟಣದ ವಿವೇಕಾನಂದ ಬಯಲು ರಂಗಮಂದಿರದಲ್ಲಿ ಬಾಲಕೃಷ್ಣನ ವೇಷ ಭೂಷಣ ಸ್ಪರ್ಧೆ ಹಾಗೂ ಯಶೋಧಾ ಮಯ್ಯಾ ರೂಪಕ ಸ್ಪರ್ಧೆಯು ಜರುಗಿತು.

ಬಾಲಕೃಷ್ಣ ವೇಶ ಭೂಷಣ ಸ್ಪರ್ಧೆಯ ಕಿರಿಯ ವಿಭಾಗದಲ್ಲಿ 32, ಹಿರಿಯರ ವಿಭಾಗದಲ್ಲಿ 32 ಸ್ಪರ್ಧಾಳುಗಳು ಭಾಗವಹಿಸಿದ್ದರು.

ಯಶೋಧಾ ಮಾಯ್ಯಾ ರೂಪಕ ಸ್ಪರ್ಧೆಗೆ 3 ಸ್ಪರ್ಧಾಳುಗಳು ಭಾಗವಹಿಸಿದ್ದರು.

ಬಾಲಕೃಷ್ಣ ವೇಶಭೂಷಣ ಸ್ಪರ್ಧೆಯ ಕಿರಿಯರ ವಿಭಾಗದಲ್ಲಿ ಪ್ರಥಮ ಬಹುಮಾನವನ್ನು ಆದ್ಯಾ ರಾಘವೇಂದ್ರ ರಾಯ್ಕರ, ದ್ವಿತಿಯ ಬಹುಮಾನವನ್ನು ತ್ರಿಷಾ ರಾಜು ಇಂಗಳೆ, ತೃತೀಯ ಬಹುಮಾನವನ್ನು ಸಾತ್ವಿಕಾ ರಾಜೇಶ ನಿಡಗುಂದಿ ಪಡೆದುಕೊಂಡರು.

ಹಿರಿಯರ ವಿಭಾಗದಲ್ಲಿ ಪ್ರಥಮ ಬಹುಮಾನವನ್ನು ಧನ್ವಿ.ವಾಯ್.ಭುಜಂಗಿ, ದ್ವಿತಿಯ ಬಹುಮಾನವನ್ನು ಅಮೂಲ್ಯ ನಾರಾಯಣ ದೌವಜ್ಞ, ತೃತೀಯ ಬಹುಮಾನವನ್ನು ಅಜಯಸೂರ್ಯ.ಎ.ಕೆ, ಪಡೆದುಕೊಂಡರು.

ಯಶೋಧಾ ಮಯ್ಯಾ ರೂಪಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಪೂಜಾ, ತಾಯಿ- ರಿಶಿತ ರಾಂಪುರೆ, ದ್ವಿತಿಯ ಬಹುಮಾನವನ್ನು ವೃಷ್ಟಿ, ತಾಯಿ- ಅರುಣಾ ಪಿ.ಕೆ, ತೃತೀಯ ಬಹುಮಾನವನ್ನು ಭುವನ, ತಾಯಿ-ಶ್ವೇತಾ.ಎನ್. ಮಡಿವಾಳರ, ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ವಿನಾಯಕ ಶೇಟ್, ದಯಾನಂದ ನಾಯ್ಕ, ವಿದ್ಯಾ ಸಣ್ಣಕ್ಕಿ, ಶಶಿಕಾಂತ ರಾಠೋಡ, ಪಾಂಡುರಂಗ ಟಿಕ್ಕೋಜಿ, ಕವಿತಾ ಚೌಹಾಣ ಸ್ಪರ್ಧೆಯ ನಿರ್ಣಾಯಕರಾಗಿದ್ದರು.

ಮಹೇಶ ಹೆಗಡೆ ಕಾರ್ಯಕ್ರಮವನ್ನು ಉದ್ಘಾಟಿಸಿದರು, ಟ್ರಸ್ಟ್‌ನ ಅಧ್ಯಕ್ಷ ಮಾರುತಿ ಓಂಕಾರ ಅಧ್ಯಕ್ಷತೆ ವಹಿಸಿದ್ದರು, ಎಮ್.ಕೆ.ಗಡಲಾಲೆ ಮುಖ್ಯ ಅತಿಥಿಗಳಾಗಿದ್ದರು. ಕಾರ್ಯಕ್ರಮದ ವ್ಯವಸ್ಥಾಪಕರಾದ ಡಾ.ಕಿರಣ ಹೂಲಗೂರ, ಅಗರವಾಲ್.ಐ.ಕೇರ್ ವ್ಯಪಸ್ಥಾಪಕರಾದ ಪ್ರತಾಪ. ಶ್ರೀಧರ ಭಭ್ಬಿ, ಸತೀಶ ಹರಿಹರ, ಮಂಜುನಾಥ ಕುಲಮಕರ. ಜಗದೀಶ ವಾಲಿಶೆಟ್ಟರ, ಉಪಸ್ಥೀತರಿದ್ದರು. ಪ್ರಾರಂಭದಲ್ಲಿ ಪ್ರಾಥನೆ ಗೀತೆಯನ್ನು ಅದಿತಿ ಕಾನಡೆ ಹಾಡಿದರು. ಟ್ರಸ್ಟ್‌ನ ಸದಸ್ಯ ಜಗದೀಶ ಕಾನಡೆ ಸ್ವಾಗತಿಸಿದರು. ದಿನೇಶ ವೆರ್ಣೇಕರ ನಿರೂಪಿಸಿದರು. ಮಂಜುನಾಥ.ಎಚ್. ಕಲಾಲ ವಂದಿಸಿದರು.

## ಅಂಕಲಗಿ-ಅಕ್ಕತಂಗೇರಹಾಳ ಪಟ್ಟಣ ಪಂಚಾಯತಿ: ವೈಯಕ್ತಿಕ ಸೌಲಭ್ಯಕ್ಕಾಗಿ ಅರ್ಜಿ ಅಹ್ವಾನ

**ಬೆಳಗಾವಿ :** ಅಂಕಲಗಿ-ಅಕ್ಕತಂಗೇರಹಾಳ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಮುಖ್ಯ ಮಂತ್ರಿಗಳ ಅಮೃತ ನಗರೋತ್ತಾನ (ಮುನ್ಸಿಪಾಲಿಟಿ) ಯೋಜನೆ (ಹಂತ-4) ರಡಿ 3 ವರ್ಷದ ಅವದಿಯ ವೈಯಕ್ತಿಕ ಸೌಲಭ್ಯಗಳನ್ನು ಪಡೆಯಲು ಅರ್ಜಿ ಆಹ್ವಾನಿಸಲಾದೆ.

ಬಿ.ಇ/ಎಂಬಿ.ಬಿ.ಎಸ್ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಪೂರೈಸುವುದು, ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಮನೆಗಳಿಗೆ ಸೋಲಾರ ವಿದ್ಯುತ್ ದೀಪ್ ಅಳವಡಿಸುವುದು, ಗ್ಯಾಸ ಸಿಲೆಂಡರ ಹಾಗೂ ವಿಕಲಚೇತನರು ತ್ರಿಚಕ್ರ ವಾಹನಗಳನ್ನು ವಿರಿಸಲಾಗುವುದು. ಎಸ್.ಸಿ.ಪಿ, ಟಿ.ಎಸ್.ಪಿ, ಇರತೆ ಹಾಗೂ ಅಂಗವಿಕಲರು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

# ಕರ್ನಾಟಕದ ಸಂಸ್ಕೃತಿಯ ಅಸ್ಮಿತೆ: ಪ್ರೊ. ಶಶಿಧರ ತೋಡಕರ




**ಧಾರವಾಡ :** ಕನ್ನಡದ ನಮ್ಮ ಹಿರಿಯರು ಕನ್ನಡ ನೆಲ ಹೇಗಿರಬೇಕು? ಅದರ ಸಂಸ್ಕೃತಿ ಹೇಗಿರಬೇಕೆಂದು? ಬಾಳಿ ಬದುಕಿ ನಾಡು ಕಟ್ಟಿಕೊಟ್ಟು ಹೋಗಿದ್ದಾರೆ ಎಂದು ಚಿಂತಕ ಪ್ರೊ. ಶಶಿಧರ ತೋಡಕರ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು, ಕರ್ನೂಲ್ ಮತ್ತು ಅನಂತಪುರ ಜಿಲ್ಲೆಗಳ ಎಲ್ಲ ಕನ್ನಡ ಸಂಘಗಳ ಸಹಯೋಗದಲ್ಲಿ ಆಂಧ್ರಪ್ರದೇಶದ ಆದವಾನಿಯಲ್ಲಿ ಆಯೋಜಿಸಿದ್ದ ಅಖಿಲ ಭಾರತ ಹೊರನಾಡ ಕನ್ನಡ ಸಂಘಗಳ 9ನೇ ಮಹಾಮೇಳದ 2ನೇ ಗೋಷ್ಠಿಯಲ್ಲಿ ಕರ್ನಾಟಕ ಸಂಸ್ಕೃತಿಯ ಅಸ್ಮಿತೆ' ಕುರಿತು ವಿಷಯ ಮಂಡನೆ ಮಾಡುತ್ತಾ ಮಾತನಾಡುತ್ತಿದ್ದರು. ಮುಂದುವರೆದು ಮಾತನಾಡಿದ ಅವರು ಕವಿರಾಜ ಮಾರ್ಗವು ಕನ್ನಡಿಗರಿಗೆ ಸಹನೆ ಮತ್ತು ಸಮರ್ಪಣೆ ಮನೋಭಾವನೆ ಕಟ್ಟಿ-ಕೊಟ್ಟ ಗ್ರಂಥ. ಇನ್ನೊಬ್ಬರ ಮಾತುಗಳನ್ನು ಕೇಳುವ ಗುಣ ಕನ್ನಡಿರ ವೈಶಿಷ್ಟ್ಯ. ಪರಧರ್ಮವನ್ನು ಗೌರವಿಸಬೇಕು. ಹಾಗಾಗಿ ಕರ್ನಾಟಕಕ್ಕೆ ಬಂದ ಎಲ್ಲ ಧರ್ಮಗಳನ್ನು ತಮ್ಮ ಧರ್ಮಗಳಂತೆ ಸ್ವೀಕರಿಸಿ, ಅವುಗಳ ಜೊತೆ ಹೊಕ್ಕು ಬಳಿಕೆ ಮಾಡುತ್ತಿದ್ದಾರೆ. ಕನ್ನಡಿಗರು ಎಂದೂ ಅವುಗಳು ಪರಧರ್ಮಗಳು ಎಂದು ಭಾವಿಸಲಿಲ್ಲ. ಕವಿರಾಜ ಮಾರ್ಗದ ಮತ್ತೊಂದು ವಿಶೇಷತೆ ಎಂದರೆ ಬ್ರಹ್ಮಾಂಡದಲ್ಲಿ ಭೂಮಿ ಎಂಬುದೊಂದಿದೆ. ಅದರಲ್ಲಿ ಭಾರತ ಎನ್ನವುದೊಂದಿದೆ. ಅದರಲ್ಲಿ ಕರ್ನಾಟಕ ಎನ್ನುವ ರಾಜ್ಯವಿದೆ. ಅವು ಒಂದುಕ್ಕೊಂದು ಸಮರಸವಾಗಿ ಬೆರೆತಿವೆ. ಹಾಗೆ ಬೆರೆತರೂ ಕೂಡ ತಮ್ಮ ಜನಗಳನ್ನು ಉಳಿಸಿಕೊಂಡಿದೆ ಎಂಬ ದೃಷ್ಟಿಕೋನದಿಂದಲೇ ಕುವೆಂಪುರವರು ಭಾರತ ಜನನೀಯ ತನುಜಾತೆ ಜಯಹೇ ಕರ್ನಾಟಕ ಮಾತೆ ಅನ್ನುವ ನಾಡಗೀತೆಯನ್ನು ರಚಿಸಲು ಸಾಧ್ಯವಾಯಿತು.

ಕನ್ನಡಿಗರು ಬರೀ ನಮ್ಮತನವನ್ನೇ ಹೇಳಿಕೊಳ್ಳುವಂತವರಲ್ಲಿ ನಮ್ಮೊಳಗೆ ಇಡೀ ಜಗತ್ತನ್ನು ಒಳಗು ಮಾಡಿಕೊಂಡು ಈ ನೆಲದ ಮೂಲಕವೇ ಜಗತ್ತನ್ನು ಕಾಣುವಂತವರು ಮತ್ತು ಕಲಿಸುವಂತವರು ಎಂಬುದನ್ನು ಕವಿರಾಜ ಮಾರ್ಗ ತಿಳಿಸಿಕೊಡುತ್ತದೆ. ಪಂಪ ಮಾನವ ಕುಲ ತಾನೊಂದೇ ವಲಂ ಎಂದು ಜಗತ್ತಿನಲ್ಲಿಯೇ ಮೊದ ಮೊದಲು ಮನುಜರೆಲ್ಲ ಒಂದೇ ಕುಲ ಒಂದು ಹೇಳಿದ ಕವಿ. ಆದರೆ ಇಂದು ನಮ್ಮ ನಮ್ಮ ಅಹಂಕಾರಗಳಿಂದ ಬಡೆದಾಡುತ್ತಿದ್ದೇವೆ. ಸರಸ್ವತಿ ಎನ್ನುವವಳು ಎಲ್ಲ ಭಾಷೆಗಳಲ್ಲಿ ಇದ್ದಾಳೆ. ಅದಕ್ಕೆ ಕನ್ನಡಿಗರು ಎಲ್ಲ ಭಾಷೆಯನ್ನು ಗೌರವಿಸಬೇಕು.

ಹಾಗೇ ಉಳಿದ ಭಾಷಿಕರು ಕನ್ನಡ ಭಾಷೆಯನ್ನು ಗೌರವಿಸಬೇಕು. ಹೀಗೆ ಜಗತ್ತಿನ ಎಲ್ಲ ಭಾಷೆಗಳಲ್ಲಿ ಅಡಗಿರುವಂಥ ಜ್ಞಾನವನ್ನು ಪಡೆದುಕೊಳ್ಳುವಂತ ಶ್ರೇಷ್ಠ ಆದರ್ಶವಾಗಿರಬೇಕು ಎಂಬುದು ಪಂಪನ ನುಡಿಯಂತೆ ಕನ್ನಡಿಗರಿದ್ದಾರೆ. ವಚನಕಾರರು ಚೈತನ್ಯದ ಸೂತ್ರವನ್ನು ಕಟ್ಟಿಕೊಟ್ಟಿರುವರು. ಲಿಂಗಭೇದ, ವರ್ಗಭೇದವಿಲ್ಲದೇ ಬದುಕು ಇರಬೇಕೆಂದು ನಮಗೆ ಕಟ್ಟಿಕೊಟ್ಟಿದ್ದಾ-ರೆ. ಶರಣರು ನಡೆ-ನುಡಿ ಸೂತ್ರವನ್ನು ಕಟ್ಟಕೊಟ್ಟಿದ್ದಾರೆ. ಕನ್ನಡಿಗರು ನುಡಿ-ದರೆ ಮುತ್ತಿನ ಹಾರದಂತಿರಬೇಕು. ದಾಸೋಹದ ದೀಕ್ಷೆ ಕೊಟ್ಟ ಬಸವಣ್ಣ ಕನ್ನಡ ನೆಲಕ್ಕೆ ಸಂಸ್ಕಾರವನ್ನು ಕೊಟ್ಟಿಕೊಟ್ಟಿದ್ದಾರೆ. ಇಂಥ ಆಗಿಹೋದ ಚೇತನಗಳು ಇಂಥ ಸೂತ್ರಗಳನ್ನು ಕನ್ನಡ ನೆಲಕ್ಕೆ ನೀಡಿ-ದ್ದರಿಂದ ಏನೆಲ್ಲ ತೊಂದರೆಗಳನ್ನು ಎದುರಿಸಿಯೂ ಬಾಳುತ್ತಿದೆಯೆಂದರೆ ಇಂಥ ಮಹಾಮಹಿಮರು ಕಾರಣ-ರಾಗಿದ್ದಾರೆ ಎಂದು ಪ್ರೊ. ಶಶಿಧರ ತೋಡಕರ ಹೇಳಿದರು. ವಾರಣಾಸಿ ಬನಾರಸ್ ವಿಶ್ವವಿದ್ಯಾಲಯದ ಡಾ. ಬಸವಪ್ರಭು ಜಿರ್ಲಿಹೊರನಾಡಿನಲ್ಲಿ ಕನ್ನಡಿಗರ ಕೊಡುಗೆ' ಕುರಿತು ವಿಷಯ ಮಂಡಿಸಿದರು. ಧಾರವಾಡದ ಪರಿಸರ ಚಿಂತಕ ಆರ್.ಜಿ. ತಿಮ್ಮಾಪೂರ ಪ್ರತಿಕ್ರಿಯಿಸಿದರು. ಧಾರವಾಡದ ಹಿರಿಯ ಸಾಹಿತಿ ವೆಂಕಟೇಶ ಮಾಚಕನೂರ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಡಿ.ಎಚ್. ವೆಂಕಟೇಶ ಸ್ವಾಗತಿಸಿದರು. ಎಸ್. ಅಹಮದ್ ವಂದಿಸಿದರು. ಕೆ. ಹನುಮಂತಪ್ಪ ನಿರೂಪಿಸಿದರು.

# ಮಠಗಳು ಕನ್ನಡ ಪ್ರಸಾರಕ್ಕೆ ಸಾಕಷ್ಟು ಕೊಡುಗೆ ನೀಡಿವೆ

**ಧಾರವಾಡ :** ಕರ್ನಾಟಕದಲ್ಲಿ ಉರ್ದು ಮತ್ತು ತೆಲಗು ಭಾಷೆಯ ಶಿಕ್ಷಣಕ್ಕೆ ಹೇಗೆ ಒತ್ತು ನೀಡಲಾಗುತ್ತಿದೆಯೋ ಅದೇ ರೀತಿ ಆಂಧ್ರಪ್ರದೇಶದಲ್ಲಿಯೂ ಕನ್ನಡ ಶಾಲೆಗಳನ್ನು ತೆರೆದು ಕಲಿಕೆಗೆ ಆದ್ಯತೆ ನೀಡಬೇಕು ಎಂದು ಬಳ್ಳಾರಿ ಚೌಕಿಮಠದ ಮರಿರಾಜೋಟಿ ಮಹಾಸ್ವಾಮಿಗಳು ಹೇಳಿದರು.



ಕರ್ನಾಟಕ ವಿದ್ಯಾ ವರ್ಧಕ ಸಂಘ ಆಂದ್ರಪ್ರದೇಶದ ಆದವಾನಿಯಲ್ಲಿ ಆಯೋಜಿಸಿದ ಅಖಿಲ ಭಾರತ ಹೊರನಾಡ ಕನ್ನಡ ಸಂಘಗಳ 9 ನೇ ಮಹಾಮೇಳದಲ್ಲಿ ಆಶೀರ್ವಚನ ನೀಡಿ ಮಾತನಾಡಿದ ಸ್ವಾಮಿಗಳು ಮಠಗಳೆಂದರೆ ಕೇವಲ ಪೂಜೆ ಪುನಸ್ಕಾರಗಳಿಗೆ ಮಾತ್ರ ಸೀಮಿತವಾಗಿಲ್ಲ ಬದಲಿಗೆ ನಾಡಿನಲ್ಲಿ ಕನ್ನಡ ಪ್ರಸಾರಕ್ಕೂ ಸಾಕಷ್ಟು ಕೊಡುಗೆಯನ್ನು ನೀಡಿವೆ, ಭಾಗದಲ್ಲಿನ ಕನ್ನಡ ಕಲಿಯುವ ಮಕ್ಕಳಿಗಾಗಿ ಚೌಕಿಮಠವು ವಸತಿ ಮತ್ತು ಪ್ರಸಾದದ ವ್ಯವಸ್ತೆಯನ್ನು ಮಾಡುವ ಮೂಲಕ ಕನ್ನಡ ಭಾಷೆಯ ಬೆಳವಣಿಗೆಗೆ ಸಹರಿಸಿದೆ. ಇಲ್ಲಿಯ ಜನರ ಮನೆ ಮಾತು ಕನ್ನಡವಾದರೂ ಸಹ ಮಕ್ಕಳಿಗೆ ಕನ್ನಡ ಕಲಿಯಲೂ ಶಾಲೆಗಳು ಇಲ್ಲದಂತಾಗಿದ್ದು ಕರ್ನಾಟಕ ಸರ್ಕಾರವು ಈ ಬಗ್ಗೆ ಗಮನ ಹರಿಸಿ ನಮ್ಮ ರಾಜ್ಯದ ಗಡಿಗಳಲ್ಲಿ ಕನ್ನಡ ಶಾಲೆಗಳನ್ನು ತೆರೆಯಿಸಬೇಕಾಗಿದೆ ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಬಳ್ಳಾರಿಯ ಲೋಹಿಯಾ ಪ್ರಕಾಶನದ ಸಿ. ಚನ್ನಬಸವಣ್ಣ ಮಾತನಾಡಿ ಕರ್ನಾಟಕದ ಏಕೀಕರಣಕ್ಕೆ ಬಳ್ಳಾರಿಯ ಕೊಡುಗೆ ಅಪಾರವಾಗಿದೆ. ಅದರಲ್ಲೂ ಥಾಮಸ್ ಮಂಟ್ರೋ ಏಕೀಕರಣದ ರೂವಾರಿಯಾಗಿದ್ದಾನೆ ಎಂದರು. ಸ್ವಾತಂತ್ರ್ಯ ಮತ್ತು ಏಕೀಕರಣದ ಮೊದಲು ನೆರೆಯ ಭಾಷೆಯಿಂದ ಕನ್ನಡದ ರಕ್ಷಣೆ ಹೇಗೆ ಎನ್ನುವ ಚಿಂತೆ ಕಾಡಿತ್ತು ಆದರೆ ಇಂದು ಆಂಗ್ಲ ಭಾಷೆಯಿಂದ ಭಾರತೀಯ ಭಾಷೆಗಳನ್ನು ಹೇಗೆ ರಕ್ಷಿಸಿಕೊಳ್ಳುಬೇಕು ಎನ್ನುವದು ಕಾಡುತ್ತಿದೆ, ಅದರಲ್ಲೂ ಕರ್ನಾಡಕದ ಗಡಿ ಭಾಗವಾದ ಇಲ್ಲಿ ಹಲವಾರು ಮಹನಿಯರು ಕನ್ನಡದ ನೆಲ,ಜಲ, ಭಾಷೆಗಾಗಿ ಹೋರಾಟ ಮಾಡಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಬಸವಪ್ರಭು ಹೊಸಕೇರಿ ಮಾತನಾಡಿದರು, ಬಾ.ನಿ. ಲಕ್ಷ್ಮೀನರಸಮ್ಮ ಬರೆದ ಮಾರುತಾತ್ಮಜಂ ಗ್ರಂಥ ಲೋಕಾರ್ಪಣೆ ಮಾಡಲಾಯಿತು.

ಈ ವೇಳೆ ವೇದಿಕೆಯಲ್ಲಿ ಕಲ್ಮಠದ ಗುರುಸಿದ್ದ ದೇವರು. ಕವಿವಿ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ. ಉಪಾಧ್ಯಕ್ಷೆ ಮಾಲತಿ ಪಟ್ಟಣಶಟ್ಟಿ.ಕೆ.ಶರಣಬಸಪ್ಪ.ಕೆ.ಸೂಗೂರಪ್ಪ. ಜಿ. ವೆಂಕಟರಮಣರೆಡ್ಡಿ.ಶ್ರೀನಿವಾಸರೆಡ್ಡಿ ನಾಗನಾಥನಹಳ್ಳಿ, ಬ. ರ. ವೀರಭದ್ರಗೌಡ, ಎಚ್ ಶಿವಶಂಕರಗೌಡ, ಕೆ. ರಾಮು, ತೋವಿ ಶ್ರೀ ಶಿವರುದ್ರಪ್ಪ ವೇದಿಕೆ ಮೇಲೆ ಉಪಸ್ಥಿತರಿದ್ದರು.

# ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ವಸತಿ ನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಕೊಪ್ಪಳ :** ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2024-25ನೇ ಸಾಲಿಗಾಗಿ ಕೊಪ್ಪಳ ಜಿಲ್ಲೆಯಲ್ಲಿರುವ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕ, ಬಾಲಕಿಯರ ವಸತಿ ನಿಲಯಗಳ(ಸಾಮಾನ್ಯ ಪದವಿ ಮಟ್ಟದ ಕೊರ್ಸುಗಳ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಕ್ಕಾಗಿ ಎಸ್.ಎಚ್.ಪಿ (ಸ್ಟೇಟ್ ಹಾಸ್ಟಲ್ ಪೋರ್ಟಲ್)ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ವಸತಿ ನಿಲಯಗಳ ವಿವರ: ಕೊಪ್ಪಳ ತಾಲೂಕಿನ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ವಸತಿ ನಿಲಯಗಳಾದ ವಿಜಯನಗರ ಬಡಾವಣೆಯ ಬಾಲಕರ ವಸತಿ ನಿಲಯ, ಗಣೇಶ ತೆಗ್ಗು ನಗರದ ಬಾಲಕ ಮತ್ತು ಬಾಲಕಿಯರ ವಸತಿ ನಿಲಯ, ಬಿಲಾಲ ನಗರದ (ಕೋರ್ಟ್ ಹಿಂದುಗಡೆ) ಬಾಲಕರ ವಸತಿ ನಿಲಯ, ಆರೋಗ್ಯ ಬಡಾವಣೆಯ ಬಾಲಕರ ವಸತಿ ನಿಲಯ ಹಾಗೂ ಕುಷ್ಟಗಿ ತಾಲೂಕಿನ ಶಾಖಾಪೂರ ರಸ್ತೆ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯ ಈ ಎಲ್ಲಾ 6 ವಸತಿ ನಿಲಯಗಳಲ್ಲಿ ಪ್ರವೇಶಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 12 ಕೊನೆಯ ದಿನವಾಗಿದ್ದು, ವಿದ್ಯಾರ್ಥಿಗಳು ಸರ್ಕಾರಿ ಅಥವಾ ಅಂಗೀಕೃತ ಕಾಲೇಜುಗಳಲ್ಲಿ ಮೆಟ್ರಿಕ್ ನಂತರದ ತರಗತಿಗಳಲ್ಲಿ ಅಭ್ಯಾಸ ಮಾಡುತ್ತಿರಬೇಕು. ವಸತಿ ನಿಲಯಗಳಲ್ಲಿ ಶೇ 75ರಷ್ಟು ಸ್ಥಾನಗಳನ್ನು ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಮತ್ತು ಶೇ 25ರಷ್ಟು ಸ್ಥಾನಗಳನ್ನು ಇತರೆ ವರ್ಗದವರಿಗೆ ಮೀಸಲಿಡಲಾಗಿದೆ. ಅಲ್ಪಸಂಖ್ಯಾತರ ವಿದ್ಯಾರ್ಥಿಗಳ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಹಾಗೂ ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನವು ರೂ. 2.50 ಲಕ್ಷಗಳಿಗೆ ಹಾಗೂ ಪ್ರವರ್ಗ-1ರ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನವು 1 ಲಕ್ಷಕ್ಕೆ ಮೀರಿರಬಾರದು. ಆಸಕ್ತ ಅರ್ಹ ಅಭ್ಯರ್ಥಿಗಳು ಅರ್ಜಿಯೊಂದಿಗೆ ತಹಶೀಲ್ದಾರ ನೀಡಿದ ಜಾತಿ ಮತ್ತು ಆದಾಯ ದೃಢೀಕರಣಪ್ರಮಾಣ ಪತ್ರ, ವಾಸಸ್ಥಳ ಪ್ರಮಾಣ ಪತ್ರ, ಆಧಾರ ಕಾರ್ಡ್, ಅಂಕಪಟ್ಟಿ ಹಾಗೂ ವಿದ್ಯಾರ್ಥಿ ಪಾಸ್ ಪೋರ್ಟ್ ಅಳತೆಯ ಇತ್ತೀಚಿನ 4 ಭಾವಚಿತ್ರಗಳೊಂದಿಗೆ ನಿಗದಿ ಪಡಿಸಿದ ದಿನಾಂಕದೊಳಗಾಗಿ ವೆಬ್‌ಸೈಟ್ https:// shp.karnataka.gov.in ನಲ್ಲಿ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿ ಪ್ರತಿ ಹಾಗೂ ಎಲ್ಲಾ ದಾಖಲೆಗಳನ್ನು ಸಂಬಂಧಿಸಿದ ವಸತಿ ನಿಲಯಗಳಿಗೆ ನೀಡಲು ಈ ಮೂಲಕ ತಿಳಿಸಿದೆ. ಕೊನೆಯ ದಿನಾಂಕದ ನಂತರ ಸ್ವೀಕೃತವಾಗುವ ಯಾವುದೇ ಅರ್ಜಿ, ಕೋರಿಕೆಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕೊಪ್ಪಳ ಮೊ.ಸಂ: 08539-225070, ಜಿಲ್ಲಾ ಮತ್ತು ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ಹಾಗೂ ಹತ್ತಿರ ವಸತಿ ನಿಲಯಗಳಿಗೆ ಭೇಟಿ ನೀಡಿ ಸಂಪರ್ಕಿಸಬಹುದಾಗಿದೆ ಎಂದು ಕೊಪ್ಪಳ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂಗನಾಳ ಗ್ರಾಮಕ್ಕೆ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಪ್ರಧಾನ ವ್ಯವಸ್ಥಾಪಕರ ಭೇಟಿ

**ಕೊಪ್ಪಳ :** ಯಲಬುರ್ಗಾ ತಾಲೂಕಿನ ಸಂಗನಾಳ ಗ್ರಾಮದಲ್ಲಿ ಘಟಿಸಿದ ದೌರ್ಜನ್ಯ ಪ್ರಕರಣ ಹಿನ್ನೆಲೆಯಲ್ಲಿ ಬೆಂಗಳೂರಿನ ಡಾ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಪ್ರಧಾನ ವ್ಯವಸ್ಥಾಪಕರು ಮತ್ತು ಕೊಪ್ಪಳ ನೋಡಲ್ ಅಧಿಕಾರಿಗಳಾದ ಕವಿತಾ ವಾರಂಗಲ್ ಅವರು ಆಗಸ್ಟ್ 22ರಂದು ಸಂಗನಾಳ ಗ್ರಾಮಕ್ಕೆ ಭೇಟಿ ನೀಡಿ, ಮೃತ ವ್ಯಕ್ತಿಯ ಕುಟುಂಬದವರಿಗೆ ಸಾಂತ್ವನ ಹೇಳಿದರು.



ಈ ವೇಳೆ ಎಫ್.ಐ.ಆರ್ ಹಂತದ ದೌರ್ಜನ್ಯ ಪ್ರಕರಣದ ಪರಿಹಾರ ಧನವನ್ನು ಮೃತ ವ್ಯಕ್ತಿಯ ತಾಯಿ ಯಲ್ಲವ್ವ ಗಂಡ ಈರಪ್ಪ ಬಂಡಿಹಾಳ ಇವರಿಗೆ ಆರ್.ಟಿ.ಜಿ.ಎಸ್ ಮುಖಾಂತರ ಪರಿಹಾರ ಧನದ ರೂ. 4,12,500ರ ಮಂಜೂರಾತಿ ಆದೇಶದ ಪ್ರತಿಯನ್ನು ನೀಡಲಾಯಿತು. ಇದರ ಜೊತೆಗೆ ಆಹಾರ ಕಿಟ್‌ನ್ನು ಸಹ ಕುಟುಂಬದವರಿಗೆ ವಿತರಿಸಲಾಯಿತು. ಈ ಸಂದರ್ಭದಲ್ಲಿ ಕೊಪ್ಪಳ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ರಾಜು ತಳವಾರ ಸೇರಿದಂತೆ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಹಾಗೂ ಮತ್ತಿತರರಿದ್ದರು.

## ಶ್ರೀ ಕೃಷ್ಣ ಜನ್ಮಾಷ್ಟಮಿ-2024

# ಕೃಷ್ಣನ ಪ್ರತಿಯೊಂದು ಕಥೆಯಲ್ಲಿ ಬದುಕಿನ ರೂಪಗಳು ಅಡಗಿವೆ: ಮಹಾಪೌರೆ ಸವಿತಾ ಕಾಂಬಳೆ





**ಬೆಳಗಾವಿ :** ಕೃಷ್ಣನ ಹುಟ್ಟಿನಿಂದ ಅಂತ್ಯದವರೆಗೆ ಅನೇಕ ರೋಚಕ ಕತೆಗಳಿದ್ದು, ಒಂದೊಂದು ಕಥೆಯಲ್ಲೂ ಬದುಕಿನ ವಿವಿಧ ರೂಪಗಳನ್ನು ತೋರುತ್ತಾನೆ ಎಂದು ಮಹಾಪೌರರಾದ ಸವಿತಾ ಕಾಂಬಳೆ ನುಡಿದರು.

ನಗರದ ಕುಮಾರ ಗಂಧರ್ವ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕಂತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ಸೋಮವಾರ (ಆ.26) ಜರುಗಿದ ಶ್ರೀಕೃಷ್ಣ ಜನ್ಮಾಷ್ಠಮಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶ್ರೀ ಕೃಷ್ಣನ ಕಥೆಗಳು ಪ್ರಪಂಚದಾದ್ಯಂತ ಪ್ರಸಿದ್ಧವಾಗಿವೆ. ಪ್ರಪಂಚದ ಮೊದಲ ಪದಗಳ ಯುದ್ಧವನ್ನು ಮೊದಲು ಮಾಡಿದವನು ಶ್ರೀಕೃಷ್ಣ. ಅರ್ಜುನನ ಮೂಲಕ ಇಡೀ ಜಗತ್ತಿಗೆ ನೀಡಿರುವ ಸಂದೇಶವೆ ಭಗವದ್ಗೀತೆ ಸರ್ವ ಕಾಲಕ್ಕೂ ಪ್ರಸ್ತುತ ಇದೆ ಎಂದು ಹೇಳಿದರು. ಕುರು-ಕ್ಷೇತ್ರ ಯುದ್ಧವೆಂದು ಕರೆಯಲಾಗುವ ಮಹಾಭಾರತ ಯುದ್ಧವು ಹಿಂದೂ ಕಾವ್ಯವಾದ ಮಹಾಭಾರತದಲ್ಲಿ ವಿವರಿಸಲ್ಪಟ್ಟ ಯುದ್ಧವಾಗಿದೆ ಎಂದು ಮಹಾಪೌರರಾದ ಸವಿತಾ ಕಾಂಬಳೆ ಹೇಳಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಶಾಸ್ತ್ರಿಯ ಭಾಷಾ ಅಧ್ಯಯನ ಸಂಸ್ಥೆ ಸಹಾಯಕ ಪ್ರಧ್ಯಾಪಕರು ಡಾ. ಗಜಾನನ ನಾಯ್ಕ ಅವರು ಮಾತನಾಡಿ, ಕೃಷ್ಣ ಕೇವಲ ಮಹಾನ್ ಪರಾಕ್ರಮಿ ಮಾತ್ರನಲ್ಲ. ಸಕಲ ಕಲೆಯನ್ನು ತನ್ನೊಂದಿಗೆ ಕರಗತ ಮಾಡಿಕೊಂಡವನು. ಮಥೈರಾದಲ್ಲಿ ವಿಷ್ಣು ದೇವರು ಜನಿಸಿದ ದಿನವನ್ನು ಶ್ರೀಕೃಷ್ಣ ಜನ್ಮಾಷ್ಟಮಿ ಎಂದು ಆಚರಿಸಲಾಗುತ್ತದೆ. ಶ್ರೀಕೃಷ್ಣ ತನ್ನ ಇಡೀ ಜೀವನದಲ್ಲಿ ಜನರಿಗೆ ಕೇವಲ ಜ್ಞಾನವನ್ನು ನೀಡಿದ್ದಾನೆ. ಅದು ಕಾಲಕ್ಷೇಪಗಳ ಮೂಲಕವಾಗಲಿ ಅಥವಾ ಗೀತಾ ಮೂಲಕವಾಗಲಿ ಇಂದಿನ ಜನರು ತಿಳಿದುಕೊಳ್ಳಬಹುದು ಎಂದರು.

ಕೃಷ್ಣನ ಬಗ್ಗೆ ಭಗವತ ಪುರಾಣ, ವಿಷ್ಣು ಪುರಾಣ, ಮಹಾಭಾರತ ಹಾಗೂ ಭಗವದ್ಗೀತೆ, ಬೌದ್ಧ ಧರ್ಮ, ಜೈನ ಧರ್ಮದಲ್ಲಿ ಉಲ್ಲೇಖವಿದೆ. ಶ್ರೀಕೃಷ್ಣನ ನೆಲೆಯನ್ನು ಗೋಕುಲ ವೃಂದಾವನ, ದ್ವಾರಕಾ, ಮಥುರ ಎಂದು ಬರೆಯಲಾಗಿದೆ. ಮಹಾಭಾರತಲ್ಲಿ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ನಡೆದ 18 ದಿನದಗಳ ಮಹಾಯುದ್ಧವನ್ನು ನಾವು ಮಹಾಭಾರತ ಭಗವದ್ಗಿತೆಯ ಮುಖಾಂತರ ತಿಳಿದುಕೊಳ್ಳಬಹುದಾಗಿದೆ ಎಂದರು.

ನಮ್ಮ ದೇಶದ ಆಚಾರ-ವಿಚಾರ, ನಡೆ-ನುಡಿ, ಧಾರ್ಮಿಕ ಮನೋಭಾವನೆ ಬೇರೆ ದೇಶದ ಜನರ ಗಮನವನ್ನು ಸೆಳೆಯುತ್ತಿದೆ. ಮಕ್ಕಳಿಗೆ ಯಾವುದೇ ದೇಶದ ಸಂಸ್ಕೃತಿ ಹೇಳದೆ . ನಮ್ಮ ದೇಶದಲ್ಲಿ ನಡೆದಿರುವ ಮಹಾಭಾರರತ, ಭಗವತ ಗೀತೆ, ರಾಮಾಯಣ ಸಂಸ್ಕೃತಿ ಬಗ್ಗೆ ಅರಿವು ಮೂಡಿಸುವುದುರ ಜೊತೆಗೆ ನಮ್ಮ ದೇಶದ ಕೀರ್ತಿಯನ್ನು ಬೆಳಗುವ ಮೌಲ್ಯವನ್ನು ಯುವಕರಲ್ಲಿ ಮೂಡಿಸಬೇಕು.

ಜೀವನದಲ್ಲಿ ಕೋಪ ದ್ವೇಷದಿಂದ ಎಲ್ಲವನ್ನೂ ಗೆಲ್ಲಲು ಸಾಧ್ಯವಿಲ್ಲ ಪ್ರೀತಿ ಪ್ರೇಮದಿಂದಲೇ ಎಲ್ಲವನ್ನು ಜಯಿಸಬಹುದು. ಒಬ್ಬ ವ್ಯಕ್ತಿ ಶತ್ರುವೂ ಆಗಬಲ್ಲ ಮಿತ್ರನೂ ಆಗಬಲ್ಲ. ಲೋಕಕಲ್ಯಾಣಕ್ಕಾಗಿ ಕೃಷ್ಣನು ನೀಡಿದ ಸಂದೇಶಗಳು ಮಹತ್ವವಾದದ್ದು,ಮಾತ್ರವಲ್ಲ ಕೃಷ್ಣನ ಜೀವನವೇ ಸಂದೇಶವಾಗಿ ನಮ್ಮ ಬಾಳನ್ನು ಬೆಳಗಬಹುದು. ಶ್ರೇಷ್ಠವಾದ ಜೀವನದ ಪಾಠವನ್ನು ನಮ್ಮ ಬದುಕಲ್ಲಿ ಅಳವಡಿಸಿಕೊಂಡರೆ ಸದಾ ನಮ್ಮ ಬದುಕಿನಲ್ಲಿ ಬೆಳಕು ಚೆಲ್ಲುವುದು ಎಂದು ಡಾ. ಗಜಾನನ ನಾಯ್ಕ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆ ಆಯುಕ್ತರಾದ ಅಶೋಕ ದುಡಗುಂಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕರು ವಿದ್ಯಾವತಿ ಭಜಂತ್ರಿ, ಬೆಳಗಾವಿ ಜಿಲ್ಲಾ ಹಣಬರ ಯಾದವ ಸಂಘ (ರಿ) ಅಧ್ಯಕ್ಷರಾದ ಎಸ್.ಎ.ಮುಂಡೆ. ಜೆ.ಎನ್.ಎಮ್.ಸಿ ಪ್ರಾಧ್ಯಾಪಕರು ಡಾ. ಅರವಿಂದ ತೇನಗಿ, ನಗರ ಸೇವಕ ಬಸವರಾಜ್ ಮೊದಗೆಕರ. ಶೀತಲ ಗುಂಡೆ, ಜಯಗೌಡ ಪಾಟೀಲ, ರವಿ ಶಾಸ್ತ್ರಿ, ಶಿವಲಿಂಗ ಪಾಟಿಲ. ಎನ್. ಎನ್ ಪಾಟೀಲ, ಗಣ್ಯರು ಸಾರ್ವಜನಿಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**ಮೆರವಣಿಗೆ:** ಇದಕ್ಕೂ ಮಮುಚೆ ನಗರದ ಅಶೋಕ ವೃತ್ತದಿಂದ ಪ್ರಾರಂಭವಾದ ಆಕರ್ಷಕ ಮೆರವಣಿಗೆಗೆ ಮಹಿಳಾ ಮತ್ತು ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ ಅವರು ಚಾಲನೆ ನೀಡಿ-ದರು. ನಗರದ ಅಶೋಕ ವೃತ್ತದಿಂದ ಪ್ರಾರಂಭವಾದ ಮೆರವಣಿಗೆ ಕುಮಾರ ಗಂಧರ್ವ ಕಲಾ ಮಂದಿರದವರೆಗೆ ಬಂದು ಸಮಾರೋಪಗೊಂಡಿತು. ಮೆರವಣಿಗೆಯಲ್ಲಿ ವೀರಗಾಸ, ಡೊಳ್ಳು ಕುಣಿತ, ಕುಂಭಮೇಳ ಸೇರಿದಂತೆ ವಿವಿಧ ಕಲಾ ತಂಡಗಳು ಪಾಲ್ಗೊಂಡಿದ್ದವು.

ಈ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಗಳ ಕ್ಷೇತ್ರ ವಿಧಾನ ಪರಿಷತ್ತು ಶಾಸಕರಾದ ಚನ್ನರಾಜ ಹಟ್ಟಿಹೊಳಿ, ಮೃನಾಳ ಹೆಬ್ಬಾಳಕರ ಹಾಗೂ ಸಮಾಜದ ಮುಖಂಡರು ಹಾಜರಿದ್ದರು.

## ತುಂತುರು ಹನಿ ನೀರಾವರಿ: ಅರ್ಜಿ ಆಹ್ವಾನ

**ಬೆಳಗಾವಿ :** ಕೃಷಿ ಇಲಾಖೆ ವತಿಯಿಂದ ರೈತರಿಗೆ ಸೂಕ್ಷ್ಮ ನೀರಾವರಿ ಯೋಜನೆ ಅಡಿಯಲ್ಲಿ ಶೇ. 90 ಸಹಾಯ ಧನದಲ್ಲಿ ತುಂತುರು ಹನಿ ನೀರಾವರಿ ಘಟಕ ಅಳವಡಿಸಲು ಅರ್ಜಿಗಳನ್ನು ಅಹ್ವಾನಿಸಲಾಗಿದೆ.

ಕೃಷಿ ಯಾಂತ್ರೀಕರಣ ಮತ್ತು ಕೃಷಿ ಸಂಸ್ಕರಣಾ ಯೋಜನೆ ಅಡಿಯಲ್ಲಿ ಕೃಷಿ ಯಂತ್ರೋಪಕರಣಗಳು ಶೇ. 50 ಸಹಾಯಧನದಲ್ಲಿ ಲಭ್ಯವಿರುತ್ತದೆ. 75,000/-ರಿಯಾಯತಿಯಲ್ಲಿ ಕೃಷಿ ಯಾಂತ್ರೀಕರಣ ಯೋಜನೆ ಅಡಿ ಮಿನಿಟ್ರ್ಯಾಕ್ಟರ ಲಭ್ಯವಿದ್ದು, ಆಸಕ್ತ ರೈತರು ಸಂಬಂಧಪಟ್ಟ ರೈತ ಸಂಪರ್ಕಕ್ಕೆ ಭೇಟಿ ನೀಡಿ ಸೂಕ್ತ ದಾಖಲೆಗಳನ್ನು ಸಲ್ಲಿಸಿ ಯೋಜನೆಯ ಲಾಭ ಪಡೆದುಕೊಳ್ಳುವಂತೆ ಬೆಳಗಾವಿ ಸಹಾಯಕ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಯುವ ಸಮೂಹ ಸಂಶೋಧನೆಗೆ ಆಧ್ಯತೆ ನೀಡಲಿ: ಡಾ. ರಬಿನಾಳ



**ಬಾಗಲಕೋಟೆ** : ಬೇರೆ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಯುವ ಸಮುದಾಯ ಹೊಸ ಆಲೋಚನೆಗಳತ್ತ ಮುಖಮಾಡಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಸಂಶೋಧನೆಗೆ ಆಧ್ಯತೆ ನೀಡಬೇಕಾಗಿದೆ ಎಂದು ಧಾರವಾಡ ವಿಶ್ವವಿದ್ಯಾಲಯದ ಭೌತಶಾಸ್ತ್ರದ ವಿಭಾಗದ ಕಾರ್ಯಾಧ್ಯಕ್ಷ ಪ್ರೊ. ಎಂ. ಕೆ. ರಬಿನಾಳ ಹೇಳಿದರು.

ನಗರದಬಿ.ವ್ಹಿ.ವ್ಹಿಸಂಘದಬಸವೇಶ್ವರವಿಜ್ಞಾನ ಮಹಾವಿದ್ಯಾಲಯದಲ್ಲಿನ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಳ್ಳಲಾಗಿದ್ದ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸವಾಲುಗಳು ಮತ್ತು ಪರಿಹಾರಗಳು'ಎಂಬ ವಿಷಯದ ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕೀರಣದಲ್ಲಿ ಪಾಲ್ಗೊಂಡು ಮಾತನಾಡಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸಂಶೋಧಕರಿಗೆ ಸಾಕಷ್ಟು ಅವಕಾಶಗಳಿವೆ, ಅನುದಾನಗಳೂ ಇವೆ. ಹೀಗಾಗಿ ಯುವ ಸಂಶೋಧನಾ ವಿದ್ಯಾರ್ಥಿಗಳು ತಮ್ಮ ಮನಸ್ಥಿತಿಯನ್ನು ಕೌಶಲ್ಯಪೂರ್ಣ ಸಂಶೋಧನೆ ಕೈಗೊಳ್ಳುವಲ್ಲಿ ತೊಡಗಿಸಿಕೊಳ್ಳಬೇಕು. ಆದರೆ ದಾರಿ ಸುಗಮವಾಗಿಲ್ಲ, ಸಾಧ್ಯತೆಗಳಿದ್ದಷ್ಟೇ ಸವಾಲುಗಳೂಇವೆ.ಸವಾಲನ್ನುಮೆಟ್ಟಿನಿಲ್ಲುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕೆಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜುಗಳ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರಾದ ಗುರುಬಸವ ಎಸ್. ಸೂಳಿಬಾವಿ ಅವರು ಮಾತನಾಡಿ ಪ್ರತಿವರ್ಷ ನಮ್ಮ ಕಾಲೇಜು ವತಿಯಿಂದ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಇಂತಹ ಅನೇಕ ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ವಿಚಾರ ಸಂಕೀರಣಗಳನ್ನು ಹಮ್ಮಿಕೊಳ್ಳುತ್ತ ಬರುತ್ತಲಿದ್ದೇವೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಜೊತೆಗೆನಮ್ಮಕಾಲೇಜಿನಹಳೆವಿದ್ಯಾರ್ಥಿಗಳ ಸಂಘವು ಇಂತಹ ಕಾರ್ಯಕ್ರಮಕ್ಕೆ ಸಹಯೋಗವನ್ನು ವಹಿಸಿಕೊಂಡು ವಿದ್ಯಾರ್ಥಿಗಳ ಕಲಿಕೆ ಮತ್ತು ಸಂಶೋಧನೆಗೆ ಮತ್ತಷ್ಟು ಉತ್ತೇಜನ ನೀಡುತ್ತಿರುವುದು ಅತ್ಯಂತ ಖುಷಿಯ ಸಂಗತಿಯಾಗಿದೆ ಎಂದರು.

ಸಂಪನ್ಮೂಲ ವ್ಯಕ್ತಿಗಳಾದ ಕೊಲ್ಹಾಪುರದ ಶಿವಾಜಿ ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಡಿ.ಎಂ. ಪೊರೆ ಹಾಗೂ ಶಿವಮೊಗ್ಗದ 'ಪಂಚವಟಿ ರಿಸರ್ಚ್ ಅಕಾಡೆಮಿ ಫಾರ್ ನೇಚರ್'ನ ಪರಿಸರ ತಜ್ಞ ಡಾ. ಕೆ.ಜಿ.ಗಿರೀಶ ಸಂಶೋಧನಾ ಸಾಧ್ಯತೆ ಮತ್ತು ಸವಾಲುಗಳ ಕುರಿತು ಸುವಿಸ್ತಾರವಾಗಿ ಉಪನ್ಯಾಸ ನೀಡಿದರು. ನಂತರದ ಅವಧಿಯಲ್ಲಿ ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಸಂಶೋಧನಾ ಪ್ರಬಂಧ ಮಂಡಿಸಿದರು.

ವೇದಿಕೆ ಮೇಲೆ ಪ್ರಾಚಾರ್ಯರಾದ ಡಾ. ಎಸ್. ಎಂ. ಗಾಂವಕರ್, ಶಿವಮೊಗ್ಗದ 'ಪಂಚವಟಿ ರಿಸರ್ಚ್ ಅಕಾಡೆಮಿ ಫಾರ್ ನೇಚರ್'ನ ಪರಿಸರ ತಜ್ಞ ಡಾ. ಕೆ.ಜಿ.ಗಿರೀಶ, ಐಕ್ಯುಎಸಿ ಸಂಯೋಜಕ ಡಾ.ಡಿ.ಎಸ್. ಲಮಾಣಿ, ಹಳೆವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಾದ ಡಾ. ಬಿ.ಎನ್. ಕಿರಸೂರ, ವಿಚಾರ ಸಂಕಿರಣದ ಸಂಘಟನಾ ಕಾರ್ಯದರ್ಶಿ ಡಾ. ಎಸ್. ಆರ್. ಕಲಾದಗಿ ಇದ್ದರು. ಪ್ರಾಚಾರ್ಯ ಡಾ. ಎಸ್. ಎಂ. ಗಾಂವಕರ್ ಸ್ವಾಗತಿಸಿ, ಡಾ. ಡಿ.ಎಸ್. ಲಮಾಣಿ ಅತಿಥಿಗಳನ್ನು ಪರಿಚಯಿಸಿದರು. ಕುಮಾರಿ ಸಹನಾ ಹಾಗೂ ತಂಡದವರು ಪ್ರಾರ್ಥಿಸಿದರು. ಶ್ರೀಮತಿ ಮಹಾನಂದ ಮಠ ಹಾಗೂ ಶ್ರೀಮತಿ ಸವಿತಾ ದಾದನಟ್ಟಿ ನಿರೂಪಿಸಿ,ವಂದಿಸಿದರು.

# ಬಾಲಾಪರಾಧಿಗಳು ಕಡಿಮೆಯಾಗಲಿ: ಕವಿತಾ ಉಂಡೋಡಿ



**ಜಮಖಂಡಿ** : ತಾಲೂಕು ಕಾನೂನು ಸೇವಾ ಸಮಿತಿ, ನ್ಯಾಯವಾದಿಗಳ ಸಂಘ, ಪೋಲಿಸ್ ಇಲಾಖೆ, ಕಾಲೇಜಿನ ಎನ್,ಎಸ್,ಎಸ್, ಘಟಕ ಹಾಗೂ ಇಕೋ ಕ್ಲಬ್‌ಗಳ ಸಂಯುಕ್ತ ಆಶ್ರಯದಲ್ಲಿ ಕಾನೂನು ಅರಿವು ನೆರವು ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದಲ್ಲಿ ಕವಿತಾ ಉಂಡೋಡಿಯವರು ಮಾತನಾಡುತ್ತ ವಿದ್ಯಾರ್ಥಿಗಳಲ್ಲಿ ಬಾಲಾಪರಾಧಗಳು ಕಡಿಮೆಯಾಗಬೇಕು, ಜೀವನದಲ್ಲಿ ಒಳ್ಳೆಯ ಮೌಲ್ಯಗಳನ್ನು ಅಳವಡಿಸಿಕೊಂಡು ಸಮಾಜದಲ್ಲಿಒಳ್ಳೆಯಪ್ರಜೆಗಳಾಗಬೇಕೆಂದು ತಿಳಿಸಿದರು.

ನ್ಯಾಯವಾದಿ ಸಂಘದ ಉಪಧ್ಯಕ್ಷರಾದ ಎಸ್.ಬಿ. ಕಾಳೆಯವರು ಮಾತನಾಡುತ್ತ ಸಂವಿಧಾನಬದ್ಧ ಮೂಲಭೂತ ಹಕ್ಕುಗಳ ಜೊತೆಗೆ ತಮ್ಮ ತಮ್ಮ ಕರ್ತವ್ಯಗಳನ್ನು ಪಾಲಿಸಬೇಕು ಎಂದು ಹೇಳಿದರು.

ಆರಂಭದಲ್ಲಿ ಚಂದ್ರಶೇಖರ ಇಂಗಳಗಾವಿ ಹಾಗೂ ಸಂಗಡಿಗರು ಸ್ವಾಗತಗೀತೆ ಹಾಡಿದರು. ಉಪನ್ಯಾಸಕಿ ಸಿ.ಎಸ್.ಜನಗೊಂಡ ಸ್ವಾಗತಿಸಿದರು, ಡಾ.ಲಿಂಗಾನಂದಗವಿಮಠಪ್ರಾಸ್ತಾವಿಕವಾಗಿ ಮಾತನಾಡಿದರು. ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯರಾದ ಸುರೇಶ ಎಸ್ ಬಿರಾದಾರ ವಹಿಸಿದ್ದರು, ವೇದಿಕೆಮೇಲೆ ಹಿರಿಯ ಉಪನ್ಯಾಸಕರಾದ ಅಶೋಕ ರಾಮದುರ್ಗ, ವಿಮಲಾ ಬೊಮ್ಮನಹಳ್ಳಿ, ಎನ್.ಎಸ್.ಎಸ್. ಘಟಕದ ಸಂಯೋಜಕರಾದ ಐ.ಎಸ್. ಹೆಬ್ಬಾಳ ಉಪಸ್ಥಿತರಿದ್ದರು, ಉಪನ್ಯಾಸಕಿ ಪ್ರತಿಭಾ ನಾಯ್ಕ ನಿರೂಪಿಸಿದರು, ಶ್ರೀಕಾಂತ ಮಾದರ, ಭವಾನಿ ಗುಗ್ಗರಿ, ಶಂಕರ ಸಂಗಾನಟ್ಟಿ, ಶ್ರೀದೇವಿ ಪಾಟೀಲ ಹಣಮಂತ ಕಾಂಬಳೆ, ನ್ಯಾಯಾಲಯ ಇಲಾಖೆಯ ಸಿಬ್ಬಂದಿ ಹಾಜವ್ವಗೋಳ ಉಪಸ್ಥಿರಿದ್ದರು ಕೊನೆಯಲ್ಲಿ ಉಪನ್ಯಾಸಕ ಕೆ.ಎಸ್.ಪೂಜಾರಿ ವಂದಿಸಿದರು.

# ಜಾತ್ರೆ, ಗಣೇಶ ಹಬ್ಬದ ಶಾಂತಿ ಸಭೆ

## ಹಬ್ಬಗಳನ್ನು ಸೌಹಾರ್ದಯುತವಾಗಿ ಆಚರಿಸಿ–ಸಿಪಿಐ



**ತೇರದಾಳ** : ದೇಶದಲ್ಲಿ ಹತ್ತಾರು ಭಾಷೆ ಜಾತಿಗಳಿದ್ದರು ನಾವೆಲ್ಲರೂ ಭಾರತೀಯರು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಹಾಗೆಯೇ ನಾವು ಆಚರಿಸುವ ಹಬ್ಬಗಳನ್ನು ಎಲ್ಲ ಸಮುದಾಯದವರು ಒಗ್ಗಟ್ಟಿನಿಂದ ಆಚರಿಸಿ ಸೌಹಾರ್ದಯುತವಾಗಿ ನಡೆದುಕೊಳ್ಳಬೇಕೆಂದು ಬನಹಟ್ಟಿ ಸಿಪಿಐ ಸಂಜೀವ ಬಳಗಾರ ಹೇಳಿದರು.

ಬುಧವಾರ ಸಂಜೆ ಇಲ್ಲಿನ ಪೊಲೀಸ್ ಠಾಣೆಯಲ್ಲಿ ನಡೆದ ಸ.2ರಂದು ನಡೆಯುವ ಅಲ್ಲಮಪ್ರಭುದೇವರ ಜಾತ್ರಾ ಮಹೋತ್ಸವ ಹಾಗೂ ಸ.7ರಿಂದ ಪ್ರಾರಂಭಗೊಳ್ಳುವ ಗಣೇಶ ಹಬ್ಬದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಾತ್ರೆ ಹಾಗೂ ಕುಸ್ತಿಗೆ ಹೆಚ್ಚಿನ ಭದ್ರತೆ ನೀಡಲಾಗುವುದು. ಅದರಂತೆ ಗಣೇಶ ಹಬ್ಬದ ವೇಳೆ ಯವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ ಎಲ್ಲರನ್ನು ವಿಶ್ವಾಸಕ್ಕೆ ತಗೆದುಕೊಂಡು ಆಚರಿಸುವಂತೆ ಸಲಹೆ ನೀಡಿದರು.

ಮುಖಂಡ ಪ್ರವೀಣ ನಾಡಗೌಡ ಮಾತನಾಡಿ, ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡುವವರು ಸಾರ್ವಜನಿಕರಿಗೆ ತೊಂದರೆ ಆಗದಂತೆ ಪೆಂಡಾಲ್ ಹಾಕಬೇಕು. ಹಾಗೂ ನಿಯಮದಂತೆ ಪುರಸಭೆ, ಹೆಸ್ಕಾಂ ಹಾಗೂ ಪೊಲೀಸ್ ಠಾಣೆಯಿಂದ ಅನುಮತಿ ಪಡೆದುಕೊಳ್ಳಬೇಕೆಂದು ಹೇಳಿದರು. ಕೇದಾರಿ ಪಾಟೀಲ, ಪ್ರಭು ಗಸ್ತಿ, ಪಾಟೀಲ, ಸಂಜು, ದಯಾನಂದ ಕಾಳೆ, ಭುಜಬಲಿ ಕೆಂಗಾಲಿ ಸಲಹೆ ಸೂಚನೆಗಳನ್ನು ನೀಡಿದರು.

ಠಾಣಾಧಿಕಾರಿ ಅಪ್ಪಣ್ಣ ಐಗಳಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸುರೇಶ ಕಬಾಡಗಿ, ಸಚಿನ ಕೊಡತೆ, ಸಂತೋಷ ಜಮಖಂಡಿ, ಸಿದ್ರಾಮ ಕಾಗಿ, ಮಾಸೂಂ ಇನಾಂದಾರ, ಅಲ್ಲಾಬಕ್ಷ ಅಲಾಸ, ಶಂಕರ ಕುಂಬಾರ, ಧನಪಾಲ ಬೋದೆನ್ನವರ, ದಸ್ತಗೀರ ತಾಂಬೊಳಿ, ತವನಪ್ಪ ಮಾಟ, ಸದಾಶಿವ ಗೋಡ್ಸೆ ಮತ್ತಿತರಿದ್ದರು.



ರಬಕವಿ–ಬನಹಟ್ಟಿ : ಯಲ್ಲಟ್ಟಿಯ ಕೊಣ್ಣೂರು ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ ಕೃಷ್ಣ ಜನ್ಮಾಷ್ಟಮಿಯನ್ನು ವಿಜ್ರಂಭಣೆಯಿಂದ ಆಚರಿಸಲಾಯಿತು.

# ನೂತನ ನಗರಸಭೆ ಅದ್ಯಕ್ಷೆ, ಉಪಾಧ್ಯಕ್ಷೆಗೆ ಅಭಿನಂದನೆ



**ಬಾಗಲಕೋಟೆ** : ಭಾರತೀಯ ಜನತಾ ಪಕ್ಷದ ಆಡಳಿತದ ನಗರಸಭೆ ಅಧ್ಯಕ್ಷೆಯಾಗಿ ಸವಿತಾ ಲಂಕೆನ್ನವರ್,ಉಪಾಧ್ಯಕ್ಷೆಯಾಗಿ ಶೋಭಾ ರಾವ ಅವರೂ ನೂತನವಾಗಿ ಆಯ್ಕೆಯಾಗಿದ್ದು ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

ನಗರ ಕುಮಾರೇಶ್ವರ ಗೇಸ್ಟ್‌ಹೌಸ್ ನಲ್ಲಿ ಭಾರತೀಯ ಜನತಾ ಪಕ್ಷ ವಿಧಾನಸಭಾ ಮತಕ್ಷೇತ್ರದ ವತಿಯಿಂದ ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ,ಸಂಸದರಾದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯನಾರಾಯಣಸಾ ಭಾಂಡಗೆ ಅವರು ನೂತನವಾಗಿ ಆಯ್ಕೆಯಾದ ನಗರಸಭೆ ಅಧ್ಯಕ್ಷೆ, ಹಾಗೂ ಉಪಾಧ್ಯಕ್ಷರುಗಳಿಗೆ ಸನ್ಮಾನಿಸಿ ಅಭಿನಂದನೆ ತಿಳಿಸಿದ್ದಾರೆ, ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ನಗರಸಭೆಯಿಂದ ನಗರದ ಸೌಂದರ್ಯದ ಜೋತಗೆ ನಗರ ನಿವಾಸಿಗೆ ಬೇಕಾಗುವ ಎಲ್ಲ ಮೂಲಸೌಲಭ್ಯವನ್ನು ನಗರಸಭೆ ಬಿಜೆಪಿ ಆಡಳಿತಾವದಿಲ್ಲಿ ನೀಡುತ್ತಾ ಬಂದಿದ್ದು, ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರು ನಗರದ ಸ್ವಷ್ಚತೆ, ಅಭಿವೃದ್ದಿಯತ್ತ ಗಮನ ಹರಿಸಿ ರಾಜ್ಯದಲ್ಲಿಯೆ ಮಾದರಿ ನಗರಸಭೆಯನ್ನಾಗಿ ಮಾಡಿ ಎಂದರು.

ಮುಖಂಡರಾದ ಜಿ.ಎನ್.ಪಾಟೀಲ,ಡಾ.ಎಂ.ಎಸ್. ದಡ್ಡೆನ್ನವರ, ಯಲ್ಲಪ್ಪ ಬೆಂಡಿಗೇರಿ, ಬಸವರಾಜ ಯಂಕಂಚಿ,ರಾಜು ನಾಯ್ಕರ, ಶಿವಾನಂದ ಟವಳಿ, ಬಸವರಾಜ ಹುನಗುಂದ,ಪ್ರಭು ಹಡಗಲಿ, ರಾಜು ಮುದೇನೂರ, ಸೇರಿದಂತೆ ನಗರಸಭೆ ಸದಸ್ಯರು ಇದ್ದರು.

# ಅಭಿನವ ಹಾಗೂ ಟಿವಿಎಸ್ ಮೋಟಾರ್ಸ್ ವತಿಯಿಂದ ಹೊಸ ದ್ವಿ ಚಕ್ರ ವಾಹನ ಬಿಡುಗಡೆ



**ಕೊಪ್ಪಳ** : ನಗರದ ಹೊಸಪೇಟೆ ರಸ್ತೆ ಬಸವೇಶ್ವರ ಸರ್ಕಲ್ ಬಳಿ ಅಭಿನವ ಮೋಟಾರ್ಸ್ ಹಾಗೂ ಟಿವಿಎಸ್ ಶೋರೂಮ್ ನಲ್ಲಿ ಆಗಸ್ಟ 29 ರ ಗುರುವಾರ ರಂದು ಅಭಿನವ ಮೋಟರ್ಸ್ ಹಾಗೂ ಟಿವಿಎಸ್ ಮೋಟರ್ಸ್ ಕಂಪನಿ ಲಿಮಿಟೆ–ಡ್ ವತಿಯಿಂದ ನ್ಯೂ ಜೂಪೀಟರ್ 110 ಸಿಸಿ ದ್ವಿಚಕ್ರ ವಾಹನವನ್ನು ಗ್ರಾಹಕರಿಗೆ ವಿತರಿಸುವುದರ ಮೂಲಕ ಬಿಡುಗಡೆ ಮಾಡಲಾಯಿತು

ಬಿಡುಗಡೆ ಸಮಾರಂಭದ ಉದ್ಘಾಟನೆಯನ್ನು ಹೀರೋ ಮೋಟಾರ್ಸ್ ಶೋ ರೂಮ್ ಮಾಲಕರಾದ ಮಹೇಶ್ ಮುದಗಲ್, ಅಭಿನವ ಮೋಟರ್ಸ್ ಶೋ ರೂಮ್ ಮಾಲಕರಾದ ಮಹೇಶ್ ನಾಲ್ವಾಡ, ಸುಗೇಶ್ ಶೆಟ್ಟರ್, ಮತ್ತು ಬಸವರಾಜ್ ತಂಬ್ರಳ್ಳಿ ರವರು ಗ್ರಾಹಕ ಶಫಿ ಅಹಮದ್ ತಂದೆ ಅಫಸರ್ ಮಿಯಾ ದಾಗ್ದಾರ ರವರಿಗೆ ವಾಹನದ ಕಿ ವಿತರಣೆ ಮಾಡುವುದರ ಮೂಲಕ ಜಂಟಿಯಾಗಿ ಉದ್ಘಾಟನೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಬಣಜಗ ಕ್ಷೇಮಾಭಿವೃದ್ಧಿ ಪತ್ತಿನ ಸೌಹಾರ್ಧ ಸಹಕಾರಿ ಸಂಘದ ಅಧ್ಯಕ್ಷರಾಗಿರುವ ಕೊಪ್ಪಳ ನಗರಸಭೆಯ ಸದಸ್ಯ ಗುರುರಾಜ್ ಹಲಗೇರಿ, ದಲ್ಲಾಲಿ ವರ್ತಕರ ಸಂಘದ ಹಾಗೂ ಬಣಜಿಗರ ಸಮಾಜದ ಅಧ್ಯಕ್ಷ ವೀರಣ್ಣ ಬುಳ್ಳ, ಉಪಾಧ್ಯಕ್ಷ ಹಾಗೂ ವರುಣ್ ಇಂಡಸ್ಟ್ರೀಸ್ ಪ್ರೋ, ಶಾಂತೇಶ ಸಂಕ್ಲಾಪುರ ಸೇರಿದಂತೆ ಉದ್ಯಮಿಗಳಾದ ಶಿವಕುಮಾರ್ ತಂಬ್ರಳ್ಳಿ, ಪ್ರಭು ತಂಬ್ರಳ್ಳಿ,, ಮಹೇಶ್ ತಂಬ್ರಳ್ಳಿ, ಮಲ್ಲಿಕಾರ್ಜುನ ಡಾಣಿ, ಮಲ್ಲಿಕಾರ್ಜುನ ಶೆಟ್ಟರ್, ಮಂಜುನಾಥ್ ಬೋರಟ್ಟಿ, ಮಹೇಶ್ ಗಂಗಾವತಿ ಸೇರಿದಂತೆ ಗಣ್ಯರು ಸಾರ್ವಜನಿಕ ಗ್ರಾಹಕರು ಅನೇಕರು ಪಾಲ್ಗೊಂಡಿದ್ದರು.

ಗ್ರಾಹಕ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಂಡು ಉತ್ತಮ ಮೈಲೇಜ್ ಹೊಂದಿರುವ ಹೊಸ ದ್ವಿಚಕ್ರ ಜೂಪಿಟರ್ 110 ಸಿಸಿ ವಾಹನ ಯೋಗ್ಯ ದರದಲ್ಲಿ ಪಡೆದುಕೊಳ್ಳಬಹುದು ಹೆಚ್ಚಿನ ಮಾಹಿತಿಗಾಗಿ ಶೋರೂಮ್ ಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ಅಭಿನವ ಮೋಟರ್ಸ್ ಹಾಗೂ ಟಿವಿಎಸ್ ಶೋರೂಮ್ ನ ಮಾಲಕರು ಪ್ರಕಟಣೆ ಮೂಲಕ ಗ್ರಾಹಕ ಸಾರ್ವಜನಿಕರಿಗೆ ತಿಳಿಸಿದ್ದಾರೆ.

**ಡಾ. ದಾನಿಗೊಂಡ ಅವರ ಜನುಮ ದಿನ ಆಚರಣೆ | ರಕ್ತದಾನ, ಉಚಿತ ಕಣ್ಣು ತಪಾಸಣೆ ಶಿಬಿರ ಆಯೋಜನೆ**

# ನನ್ನೂರು ಬೆಳೆಯಬೇಕೆಂಬುದೆ ನನ್ನ ಆಸೆ: ಡಾ. ಮಹಾವೀರ





**ತೇರದಾಳ** : ನನಗೆ ಜನ್ಮ ನೀಡಿದ ಊರು ಬೆಳೆಯಬೇಕೆಂಬುದೆನನ್ನಆಸೆ.ಆದ್ದರಿಂದಲೇ ಸಾಕಷ್ಟು ಸವಾಲ್‌ಗಳನ್ನು ಎದುರಿಸಿ ಶಿಕ್ಷಣ ಸಂಸ್ಥೆಗಳನ್ನುಪ್ರಾರಂಭಿಸಲಾಗಿದೆ.ನನ್ನೂರು ಬೆಳೆಯಬೇಕೆಂಬುದೆ ನನ್ನ ಉದ್ದೇಶವಾಗಿದೆ ಎಂದು ಇಲ್ಲಿನ ಪ್ರತಿಷ್ಠಿತ ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆಗಳ ಚೇರಮನ್ ಡಾ. ಮಹಾವೀರ ದಾನಿಗೊಂಡ ಹೇಳಿದರು. ಡಾ.ಎಂ.ಎಸ್.ದಾನಿಗೊಂಡಅವರಜನುಮ ದಿನದ ನಿಮಿತ್ತ ಅವರ ಅಭಿಮಾನಿಗಳು ಹಿತೈಸಿಗಳು ದಾನಿಗೊಂಡ ಸಮೂಹ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ಶುಭ ಹಾರೈಕೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಮ್ಮೂರಿನ ವಿದ್ಯಾರ್ಥಿಗಳು ಸಾಕಷ್ಟು ಪ್ರತಿಭಾವಂತರಿದ್ದರು ಕೂಡ ಉನ್ನತ ಶಿಕ್ಷಣ ಕಲಿಯಲು ಬೇರೆ ಕಡೆಗೆ ಹೋಗಲು ಸಾಧ್ಯವಾಗದ ಎಷ್ಟೋ ವಿದ್ಯಾರ್ಥಿಗಳು ಕಲಿಕೆಯನ್ನು ಸ್ಥಗಿತಗೊಳಿಸಿದ್ದಾರೆ. ಆದ್ದರಿಂದನಮ್ಮಭಾಗದಮಕ್ಕಳಿಗೂಉನ್ನತ ಮತ್ತು ಗುಣಮಟ್ಟದ ಶಿಕ್ಷಣ ದೊರೆಯಲಿ ಎಂಬ ಉದ್ದೇಶದಿಂದ ಹಲವು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಲಾಗಿದೆ. ಪಟ್ಟಣದ ಎಲ್ಲ ಸಮುದಾಯದವರ ಸಹಕಾರದಿಂದ ಇಂದು ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆ ಬೆಳೆಯುತ್ತಿದೆ ಎಂದು ಹೇಳಿದರು.

ಡಾ. ಎಂ.ಎಸ್. ದಾನಿಗೊಂಡ ಅವರ ಜನುಮ ದಿನದ ನಿಮಿತ್ತ ಸ್ವಯಂ ಪ್ರೇರಿತ ರಕ್ತದಾನ, ಉಚಿತ ಕಣ್ಣು ತಪಾಸಣೆ ಶಿಬಿರ, ನೂತನವಾದ ಮಾಧವ ರೋಗನಿದಾನ ಸಂಗ್ರಹಾಲಯ ಉದ್ಘಾಟನೆ ಜರುಗಿತು. ಶಾಸಕ ಸಿದ್ದು ಸವದಿ, ಎಸ್‌ಡಿಎಂ ಟ್ರಷ್ಟ್‌ನ ಪ್ರತಿಭಾ ದಾನಿಗೊಂಡ, ವ್ಯವಸ್ಥಾಪಕ ನಿರ್ದೇಶಕ ಡಾ. ಪುಷ್ಪದಂತ ದಾನಿಗೊಂಡ, ಭೂಪಾಲ ಆಲಗೂರ, ಪ್ರಭು ಹಿಪ್ಪರಗಿ, ಅಜೀತ ಮಗದುಂ, ಡಾ. ಮಧುರಾ ದಾನಿಗೊಂಡ, ಜಿನ್ನಪ್ಪ ಸವದತ್ತಿ, ಬಾಹುಬಲಿ ಬಿಲವಡಿ, ಭೀಮಪ್ಪ ಆಳಗೊಂಡ, ಪ್ರವೀಣ ನಾಶಿ, ಸುರೇಶ ಮರಡಿ, ಬಸವರಾಜ ದಲಾಲ, ಶೇಖರ ಕೊಟ್ರಶೆಟ್ಟಿ, ಸಂಸ್ಥೆ ಆಡಳಿತಾಧಿಕಾರಿ ರಾಜೇಂದ್ರ ಪರೀಟ, ಡಾ. ಪ್ರಭಾಕರ ಅಪರಾಜ, ಡಾ. ಉಗಾರೆ, ಪ್ರದೀಪ ಪಾಟೀಲ, ಪಿ.ಬಿ. ಮಾಳಿ ಸೇರಿದಂತೆ ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ವರ್ಗ ವಿದ್ಯಾರ್ಥಿಗಳು ಇದ್ದರು.

# ಪ್ರೋತ್ಸಾಹಧನಕ್ಕಾಗಿ ಅರ್ಜಿ

**ಬಾಗಲಕೋಟೆ** : ಕಳೆದ 2023–24ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ, ಪದವಿ, ಸ್ನಾತಕೋತ್ತರ ಪದವಿ ಹಾಗೂ ಇತರೆ ಕೋರ್ಸಗಳ ಅಂತಿಮ ಪರೀಕ್ಷೆಗಳಲ್ಲಿ ಪ್ರಥಮ ಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾದ ಪರಿಶಿಷ್ಟ ಜಾತಿ, ಪಂಗಡದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡುವ ಸಲುವಾಗಿ ಅರ್ಜಿ ಆಹ್ವಾನಿಸಲಾಗಿದೆ. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇ.60 ರಿಂದ 75 ಅಂಕ ಪಡೆದರೆ 7 ಸಾವಿರ ರೂ, ಶೇ.75 ರಿಂದ 100 ರಷ್ಟು ಪಡೆದರೆ 15 ಸಾವಿರ ರೂ, ಪಿಯುಸಿ, ಡಿಪ್ಲೋಮಾಗೆ 20 ಸಾವಿರ ರೂ, ಪದವಿಗೆ 25 ಸಾವಿರ ರೂ, ಎಂ.ಎ, ಎಂ.ಎಸ್.ಸಿ, ಎಂ.ಕಾಮ್, ಎಂಸಿಎ ಹಾಗೂ ಇತರೆ ಕೋರ್ಸಗಳಿಗೆ 30 ಸಾವಿರ ರೂ, ಅಗ್ರಿಕಲ್ಚರ, ಇಂಜಿನೀಯರಿಂಗ್, ಮೆಡಿಸಿನ ಹಾಗೂ ವೆಟರ್‌ನರಿ ಕೋರ್ಸಗಳಿಗೆ 35 ಸಾವಿರ ರೂ, ಪ್ರೋತ್ಸಾಹಧನ ನೀಡಲಾಗುತ್ತದೆ. ಪ್ರೋತ್ಸಾಹಧನಕ್ಕಾಗಿ ವೆಬ್‌ಸೈಟ್ http://swd-services.karnataka.in/PrizeMoneyClientApp/ ಮೂಲಕ ಅರ್ಜಿಗಳನ್ನು ಸಲ್ಲಿಸುವಂತೆ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಸೈರಾಬಾನು ನದಾಫ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State